# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಏಪ್ರಿಲ್ 15, 2023

ಸಂಪುಟ : 49 ಸಂಚಿಕೆ : 333 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





ಡಾ.ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತ್ಯೋತ್ಸವದ ಪ್ರಯುಕ್ತ ದಾವಣಗೆರೆ ಅಂಬೇಡ್ಕರ್ ವೃತ್ತದಲ್ಲಿ ಶುಕ್ರವಾರ ಕರ್ನಾಟಕ ಭೀಮ್ ಸೇನೆಯಿಂದ ಅಂಬೇಡ್ಕರ್ ಪುತ್ಥಳಿಗೆ ಹಾಲಿನ ಅಭಿಷೇಕ ಮಾಡಲಾಯಿತು.

## ಕುಡುಗೋಲು, ತೆನೆ ಚಿಹ್ನೆ ಉಳಿಕೆಗೆ ಸಿಪಿಐ ಯತ್ನ

ನವದೆಹಲಿ, ಏ. 14 – ರಾಷ್ಟ್ರೀಯ ಪಕ್ಷದ ಮಾನ್ಯತೆ ಕಳೆದುಕೊಂಡಿರುವ ಸಿ.ಪಿ.ಐ. ಪಕ್ಷ, ಕರ್ನಾಟಕ ವಿಧಾನಸಭಾ ಚುನಾವಣೆಯನ್ನು ತನ್ನ ಕುಡುಗೋಲು ತೆನೆ ಚಿಹ್ನೆಯಲ್ಲೇ ಎದುರಿಸುವ ಪ್ರಯತ್ನ ನಡೆಸಿದೆ ಎಂದು ಪಕ್ಷದ ಸಂಸದ ಬಿನಯ್ ವಿಶ್ವಮ್ ತಿಳಿಸಿದ್ದಾರೆ.

1989ರಲ್ಲಿ ಸಿ.ಪಿ.ಐ. ರಾಷ್ಟ್ರೀಯ ಪಕ್ಷ ಎಂಬ ಮಾನ್ಯತೆ ಪಡೆದಿತ್ತು. ಅಲ್ಲದೇ, ಎಲ್ಲಾ ಸಾರ್ವತ್ರಿಕ ಚುನಾವಣೆಗಳಲ್ಲಿ ಒಂದೇ ಚಿಹ್ನೆಯಲ್ಲಿ ಲೋಕಸಭೆಗೆ ಪ್ರವೇಶ ಪಡೆಯುತ್ತಾ ಬಂದಿರುವ ಏಕೈಕ (3ನೇ ಪುಟಕ್ಕೆ)

## ಮಾಯಕೊಂಡ ಕ್ಷೇತ್ರ ಆನಂದಪ್ಪಗೆ ಜೆಡಿಎಸ್ ಟಿಕೆಟ್



ಬೆಂಗಳೂರು, ಏ.14- ರಾಜ್ಯ ವಿಧಾನಸಭೆ ಚುನಾವಣೆಯ 50 ಮಂದಿ ಜೆಡಿಎಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ಇಂದು ಬಿಡುಗಡೆಯಾಗಿದ್ದು, ತೀವ್ರ ಕುತೂಹಲ ಕೆರಳಿಸಿದ್ದ ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಶಾಸಕ ಎಚ್.ಎಸ್. ಪ್ರಕಾಶ್ ಅವರ ಪುತ್ರ ಎಚ್.ಪಿ.ಸ್ವರೂಪ್ ಪ್ರಕಾಶ್ ಅವರನ್ನು ಕಣಕ್ಕಿಳಿಸಲಾಗಿದೆ.

ಕಾಂಗ್ರೆಸ್, ಬಿಜೆಪಿ ತೊರೆದು ಜೆಡಿಎಸ್‌ಗೆ ಸೇರ್ಪಡೆಯಾಗಿದ್ದ ಎಲ್ಲಾ ವಲಸಿಗರಿಗೂ ಎರಡನೇ ಪಟ್ಟಿಯಲ್ಲಿ ಹಾಕಲಾಗಿದೆ. (3ನೇ ಪುಟಕ್ಕೆ)

## ಹಾಲಿನ ಉತ್ಪನ್ನಗಳ ಆಮದಿಲ್ಲ : ಕೇಂದ್ರ

ನವದೆಹಲಿ, ಏ. 14 - ಬೆಣ್ಣೆ ಮತ್ತಿತರೆ ಹಾಲಿನ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವುದಿಲ್ಲ ಎಂದು ಕೇಂದ್ರ ಪಶುಪಾಲನಾ ಸಚಿವ ಪರಶೋತ್ತಮ್ ರುಪಾಲ ತಿಳಿಸಿದ್ದಾರೆ.

ಚರ್ಮಗಂಟು ರೋಗದ ಕಾರಣದಿಂದಾಗಿ 2022-23ರ ಸಾಲಿನಲ್ಲಿ ಹಾಲಿನ ಉತ್ಪಾದನೆ ಕುಂಠಿತವಾಗಿದೆ. ಈ ಹಿನ್ನೆಲೆಯಲ್ಲಿ ಹಾಲಿನ ಉತ್ಪನ್ನಗಳ ಆಮದಿನ ಮಾತುಗಳು ಕೇಳಿ ಬಂದಿದ್ದವು.

ಈ ಬಗ್ಗೆ ಹೇಳಿಕೆ ನೀಡಿರುವ ರುಪಾಲ, ಹಾಲಿನ ಉತ್ಪನ್ನಗಳ ಕೊರತೆ ಇಲ್ಲ. ಆಮದು ಮಾಡಿಕೊಳ್ಳು ವುದಿಲ್ಲ ಎಂದಿದ್ದಾರೆ. ಸರ್ಕಾರ ನಿರಂತರ ನಿಗಾ ವಹಿಸಿದೆ. ದೇಶದಲ್ಲಿ ಹಾಲಿನ ಕೊರತೆ ಇಲ್ಲ. ಬೇಡಿಕೆ (3ನೇ ಪುಟಕ್ಕೆ)


# ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾ. ಹಳೇಕುಂದುವಾಡ ಗ್ರಾಮದ ವಾಸಿ
ಹಂಚಿನಮನೆ ಶ್ರೀ ದೊಡ್ಡಪ್ಪ ಹೆಚ್.ಜಿ. ಶ್ರೀ ಹೆಚ್.ಜಿ. ಮಂಜಪ್ಪ, ಶ್ರೀ ಹೆಚ್.ಜಿ. ಧರ್ಮೇಶ್
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 26.03.2023ನೇ ಭಾನುವಾರ ಸಂಜೆ 7 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ
(ದಿ. ಶ್ರೀ ಹಂಚಿನಮನೆ ಗಣೇಶಪ್ಪ ಇವರ ಧರ್ಮಪತ್ನಿ)

## ಶ್ರೀಮತಿ ಹಂಚಿನಮನೆ ಪಾರ್ವತಮ್ಮ

ಇವರು ಸ್ವರ್ಗಸ್ಥರಾದ ಪ್ರಯುಕ್ತ, ಮೃತರ ಆತ್ಮಶಾಂತಿಗಾಗಿ ಕೈಲಾಸ ಸಮಾರಾಧನೆಯನ್ನು ದಿನಾಂಕ 15.04.2023ನೇ ಶನಿವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾ. ಹಳೇಕುಂದುವಾಡ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ಲೀಲಾವತಿ ಶ್ರೀ ಹೆಚ್.ಜಿ. ದೊಡ್ಡಪ್ಪ
ಶ್ರೀಮತಿ ಬಸವರಾಜೇಶ್ವರಿ ಶ್ರೀ ಹೆಚ್.ಜಿ. ಮಂಜಪ್ಪ
ಶ್ರೀಮತಿ ವನಜಾಕ್ಷಿ, ಶ್ರೀಮತಿ ಜಲಜಾಕ್ಷಿ ಶ್ರೀ ಹೆಚ್.ಜಿ. ಧರ್ಮೇಶ್
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು
ಹಂಚಿನಮನೆ ವಂಶಸ್ಥರು, ಸೋಮಪ್ಪರ ವಂಶಸ್ಥರು, ಗೌಡ್ಲರ ವಂಶಸ್ಥರು, ಅಣ್ಣೇರ್ ವಂಶಸ್ಥರು
ಹಳೇಕುಂದುವಾಡ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
ಮೊ : 94483 39420, 96321 59751, 94803 83089

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.








## 16ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ರಾಮಲಿಂಗಪ್ಪ ಭೈರಶೆಟ್ಟರ್
ದಾವಣಗೆರೆ.
ಜನನ : 10.5.1940, ನಿಧನ : 10.04.2007
ನೀವು ನಮ್ಮನ್ನಗಲಿ ಹದಿನಾರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆ ಹಾಗೂ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
ನಿಮ್ಮ ಪತ್ನಿ ಶ್ರೀಮತಿ ರತ್ನ,
ಪುತ್ರ, ಪುತ್ರಿಯರು, ಅಳಿಯಂದಿರು,
ಹಾಗೂ ಮೊಮ್ಮಕ್ಕಳು, ದಾವಣಗೆರೆ.





# ಟೀಕೆಗಳನ್ನು ಬಿಟ್ಟು ಪಕ್ಷ ಗೆಲ್ಲಿಸುವ ಕಡೆ ಗಮನ ಕೊಡಬೇಕು

## ಹರಿಹರದ ಬಿಜೆಪಿ ಸಭೆಯಲ್ಲಿ ಕಾರ್ಯಕರ್ತರಲ್ಲಿ ಮನವಿ ಮಾಡಿದ ಅಭ್ಯರ್ಥಿ ಬಿ.ಪಿ. ಹರೀಶ್

ಹರಿಹರ, ಏ. 14 – ಕ್ಷೇತ್ರದ ಸಮಸ್ಯೆ ಎದುರಿಸುತ್ತಿರುವ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು, ಹರಿಹರದಿಂದ ಸ್ಪರ್ಧಿಸಲಿ ಎಂದು ಪ್ರಾರ್ಥಿಸುವೆ. ಅವರ ವಿರುದ್ಧ ಸ್ಪರ್ಧಿಸಿ ಗೆಲ್ಲುವುದು ಮನದಾಸೆಯಾಗಿದೆ ಎಂದು ಮಾಜಿ ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಾಮಪತ್ರವನ್ನು ಸಲ್ಲಿಸುವ ಸಂಬಂಧ ನಗರದ ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಿದ್ದರಾಮಯ್ಯ ಸ್ಪರ್ಧಿಸಲು ಕ್ಷೇತ್ರದ ಸಮಸ್ಯೆ ಇರುವುದನ್ನು ನೋಡಿದರೆ, ಅತ್ಯಂತ ಶೋಚನೀಯ ಸ್ಥಿತಿಗೆ ತಲುಪಿರುವುದು ಗೊತ್ತಾಗುತ್ತಿದೆ ಎಂದರು.

ಹರಿಹರ ಕ್ಷೇತ್ರದಲ್ಲಿ ವಿರೋಧ ಪಕ್ಷದವರ ಬಗ್ಗೆ ಆರೋಪ, ಪ್ರತ್ಯಾರೋಪ ಮಾಡಿದರೆ ಮತದಾರರು ಅದನ್ನು ತಮಾಷೆಯಾಗಿ ಸ್ವೀಕರಿಸುತ್ತಾರೆ. ಯಾರ ಬಗ್ಗೆಯೂ ಟೀಕೆ ಮಾಡದೇ ಪಕ್ಷ ಗೆಲ್ಲಿಸುವ ಕಡೆ ಗಮನ ಹರಿಸಬೇಕು ಎಂದವರು ಕರೆ ನೀಡಿದರು.

ಭದ್ರಾ ಹಾಗೂ ದೇವರಬೆಳಕೆರೆ ನಾಲೆಗಳ ನೀರನ್ನು ಕೊನೆ ಭಾಗದ ರೈತರಿಗೆ ತಲುಪಿಸುವ, ಕೆರೆಗಳ ಅಭಿವೃದ್ಧಿ, ಕಾರ್ಖಾನೆಗಳ ಸ್ಥಾಪನೆ, ಸಮಗ್ರ ಕುಡಿಯುವ ನೀರಿನ ಯೋಜನೆ ಸೇರಿದಂತೆ ಹಲವಾರು ಯೋಜನೆಗಳ ಕನಸಿದೆ ಎಂದವರು ಹೇಳಿದರು.

ಇದೇ ದಿನಾಂಕ 18 ರಂದು ಮಂಗಳವಾರ ನಮ್ಮ ಮನೆ ದೇವರು ಉಚ್ಚಂಗೆಮ್ಮ ಮತ್ತು ಹರಿಹರ ಗ್ರಾಮದೇವತೆ ಊರಮ್ಮ ದೇವಿಯ ವಾರ ಆಗಿರುವುದರಿಂದ ಅಂದು ನಾಮಪತ್ರ ಸಲ್ಲಿಸುತ್ತೇನೆ ಎಂದು ಹರೀಶ್ ತಿಳಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಮಾತನಾಡಿ, ಕ್ಷೇತ್ರದಲ್ಲಿ ಶಾಸಕ ಎಸ್. ರಾಮಪ್ಪನವರ ಕೊಡುಗೆ ಶೂನ್ಯವಾಗಿದೆ. ರಾಮಪ್ಪ ತಮ್ಮ ಐದು ವರ್ಷಗಳ ಅವಧಿಯಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯವನ್ನು ಮಾಡದೇ ಸುಳ್ಳು ಹೇಳುತ್ತಾ ಕಾಲಹರಣ ಮಾಡಿದರು ಎಂದು ಹೇಳಿದರು.



**ನನಗೆ ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸಿ ಗೆಲ್ಲುವ ಆಸೆ : ಬಿ.ಪಿ. ಹರೀಶ್**

ಎನ್.ಜಿ. ನಾಗನಗೌಡ್ರು ಮಾತನಾಡಿ, ಚುನಾವಣೆ ಯುದ್ಧ ಈಗ ಆರಂಭವಾಗಿದೆ. ಕಾರ್ಯಕರ್ತರು ಸೈನಿಕರ ರೀತಿಯಲ್ಲಿ ಹೋರಾಟ ಮಾಡಿ ಬಿಜೆಪಿ ಪಕ್ಷವನ್ನು ಗೆಲ್ಲಿಸಬೇಕು ಎಂದು ಕರೆ ನೀಡಿದರು.

ಬೆಳ್ಳೂಡಿ ರಾಮಚಂದ್ರಪ್ಪ ಮಾತನಾಡಿ, ಹರಿಹರ ಕ್ಷೇತ್ರದ ಒಗ್ಗಟ್ಟಿನ ರಾಜಕೀಯ ರಾಜ್ಯಕ್ಕೆ ಮಾದರಿಯಾಗಿದೆ. ಪಕ್ಷದಲ್ಲಿ ಒಂದಿಷ್ಟು ಸಮಸ್ಯೆಗಳು ಇದ್ದರೆ ಅವುಗಳನ್ನು ಸರಿಪಡಿಸಿಕೊಂಡು ಹೋಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಗಳಿ ಇಂಧೂದರ, ಉಸ್ತುವಾರಿ ಜೀವನಮೂರ್ತಿ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಲೇಶಪ್ಪ ಸಿರಿಗೆರೆ, ತಾಪಂ ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ವಿಜಯಕುಮಾರ್, ಹನುಮಂತಪ್ಪ, ತಾಲ್ಲೂಕು ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟ, ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿ ತುಳಜಪ್ಪ ಭೂತೆ, ಹೆಚ್. ಮಂಜಾನಾಯ್ಕ್, ಮುಖಂಡರಾದ ಬೆಳ್ಳೂಡಿ ರಾಮಚಂದ್ರಪ್ಪ, ಇಂಧೂದರ, ಚಂದ್ರಪ್ಪ ಬಾತಿ, ಆದಾಪುರ ವೀರಭದ್ರಪ್ಪ, ಆರ್.ಸಿ. ಪಾಟೀಲ್, ಕೆಂಚನಹಳ್ಳಿ ಮಹಾಂತೇಶಪ್ಪ, ರಾಜು ರೋಖಡೆ, ಅಂಬುಜಾ ಪಿ ರಾಜೋಳ್ಳಿ, ಪರಶುರಾಮ್ ಕಾಟ್ವೆ, ಹೆಚ್. ನಾಗರಾಜ್ ಅಮರಾವತಿ, ದೇವೇಂದ್ರಪ್ಪ, ಪರಶುರಾಮ್, ಪ್ರಶಾಂತ್ ಸಂತೋಷ ಗುಡಿಮನಿ, ರಾಘವೇಂದ್ರ ಕೊಂಡಜ್ಜಿ, ಆಂಜನೇಯ, ರಾಜೀವ್, ಮಂಜುನಾಥ್ ಮಲೇಬೆನ್ನೂರು, ಬಸವರಾಜ್ ಕುಮಾರನಹಳ್ಳಿ, ಜಿಗಳಿ ಹನುಮಗೌಡ, ತಾಪಂ ಮಾಜಿ ಅಧ್ಯಕ್ಷೆ ಶ್ರೀದೇವಿ ಮಂಜಪ್ಪ, ಎನ್.ಇ. ಸುರೇಶ್, ಬಸವನಗೌಡ, ಸುನೀಲ್, ಚಂದ್ರಕಾಂತ್, ಸುನೀಲ್, ರವಿ ರಾಯ್ಕರ್, ನಾಗರಾಜ್, ಬೀರಪ್ಪ, ವೆಂಕಟೇಶ ಶೆಟ್ಟಿ, ಮಂಜುನಾಥ್ ಕಡರನಾಯಕನಹಳ್ಳಿ ಮತ್ತಿತರರು ಹಾಜರಿದ್ದರು.

**ಭಾವುಕರಾದ ಹರೀಶ್ :** ಸಭೆಯಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ಅವರಿಗೆ ನಗದು ಹಾಗೂ ಚೆಕ್ ರೂಪದಲ್ಲಿ ಚುನಾವಣಾ ಖರ್ಚಿಗೆ ನೆರವು ಸಲ್ಲಿಸಿದರು. ಈ ಸಂದರ್ಭದಲ್ಲಿ ಭಾವುಕರಾಗಿ ಮಾತನಾಡಿದ ಹರೀಶ್, 22ನೇ ವಯಸ್ಸಿನಲ್ಲಿ ರಾಜಕೀಯಕ್ಕೆ ಕಾಲಿಟ್ಟಾಗ ಇದೇ ರೀತಿಯ ನೆರವು ನೀಡಿದ್ದು ಪ್ರೇರಣೆಯಾಗಿತ್ತು ಎಂದರು.

ಈ ವೇಳೆ ಮಂಜುನಾಥ್ ಕಡಾರನಾಯಕನಹಳ್ಳಿ ಒಂದು ಲಕ್ಷ ರೂ., ವೆಂಕಟೇಶ ಶೆಟ್ಟಿ ಐವತ್ತು ಸಾವಿರ ರೂ., ಕೆಂಚನಹಳ್ಳಿ ಮಹಾಂತೇಶ್ ಐವತ್ತು ಸಾವಿರ ರೂ., ಸೇರಿದಂತೆ ಹಲವಾರು ಕಾರ್ಯಕರ್ತರು ಮುಖಂಡರು ಚುನಾವಣಾ ನಿಧಿಗೆ ಹಣ ನೀಡಿದರು.



## ಅಂಬೇಡ್ಕರ್ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಧೀಮಂತ ನಾಯಕ

**ಜಗಳೂರು ತಹಶೀಲ್ದಾರ್ ಜಿ.ಸಂತೋಷ್ ಕುಮಾರ್**

ಜಗಳೂರು, ಏ.14- ಡಾ.ಬಿ.ಆರ್. ಅಂಬೇಡ್ಕರ್, ಸಾಮಾಜಿಕ ನ್ಯಾಯ ಮತ್ತು ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಡಿದ ಮಹಾನ್ ನಾಯಕರು ಎಂದು ತಹಶೀಲ್ದಾರ್ ಜಿ. ಸಂತೋಷ್ ಕುಮಾರ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ನೂತನವಾಗಿ ನಿರ್ಮಿಸಿದ ಡಾ.ಬಿ.ಆರ್. ಬಾಬಾ ಸಾಹೇಬ್ ಅಂಬೇಡ್ಕರ್ ಪುತ್ಥಳಿಗೆ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಪುತ್ಥಳಿ ಸಮಿತಿಯಿಂದ ಇಂದು ಬೆಳಿಗ್ಗೆ ಮಾಲಾರ್ಪಣೆ ಮಾಡಿ, ನಂತರ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಸರಳವಾಗಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಹೋರಾಟಗಾರ ಅಂಬೇಡ್ಕರ್ ಅವರು, ಕೆಳಜಾತಿಯ ಮಹಾರ್ ಕುಟುಂಬದಲ್ಲಿ ಜನಿಸಿದರು. ಅವರು ದೇಶಕ್ಕಾಗಿ ಸಂವಿಧಾನವನ್ನು ರೂಪಿಸಿದ ಮಹಾನ್ ನಾಯಕರಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಚುನಾವಣಾಧಿಕಾರಿ ಎಸ್.ರವಿ, ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ. ತಾ.ಪಂ ಇ.ಓ. ಚಂದ್ರಶೇಖರ್, ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಶ್ರೀನಿವಾಸ್, ಪ.ಪಂ ಮುಖ್ಯ ಅಧಿಕಾರಿ ಲೋಕ್ಯಾನಾಯ್ಕ, ಆರ್.ಐ.ಕುಬೇರ ನಾಯ್ಕ, ದಲಿತ ಮುಖಂಡರಾದ ಪೂಜಾರ್ ಸಿದ್ದಪ್ಪ, ಸತೀಶ್, ಕುಬೇಂದ್ರಪ್ಪ, ದೇವೇಂದ್ರಪ್ಪ, ಬಸವರಾಜಪ್ಪ ಮುಖಂಡರಾದ ಬಡಪ್ಪ, ಬಾಬು, ತಿಪ್ಪೇಸ್ವಾಮಿ ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.



## ಜಿಲ್ಲಾ ಸ.ನಿ.ನೌಕರರ ಸಂಘದಲ್ಲಿ ಅಂಬೇಡ್ಕರ್ ಜಯಂತಿ

ದಾವಣಗೆರೆ, ಏ. 14 - ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ವತಿಯಿಂದ ನಿವೃತ್ತ ನೌಕರರ ಭವನದಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 132 ನೇ ಜಯಂತಿ ಆಚರಿಸಲಾಯಿತು.

ರಾಜ್ಯ ಸಂಘದ ವಿಭಾಗೀಯ ಉಪಾಧ್ಯಕ್ಷ ಎಸ್.ಗುರುಮೂರ್ತಿ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜೀವನ ಮತ್ತು ಅವರು ಭಾರತದ ಸಂವಿಧಾನ ರಚನೆ ಮಾಡಿ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಸದೃಢವಾಗಿ ಬೆಳೆಯಲು ಭದ್ರ ಬುನಾದಿ ಹಾಕಿಕೊಟ್ಟ ಸಂವಿಧಾನ ಶಿಲ್ಪಿ ಎಂದು ನೆನಪಿಸಿಕೊಂಡರು.

ಸಮಾರಂಭದ ಅಧ್ಯಕ್ಷತೆಯನ್ನು ಎಂ.ಆರ್. ಉಜ್ಜನಪ್ಪ ವಹಿಸಿದ್ದರು. ಕಾರ್ಯದರ್ಶಿ ಬಿ.ಕೆ ರೇಣುಕಾಮೂರ್ತಿ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಡಾ ವೀರಯ್ಯ, ಎನ್ ಜಿ ಬಸವರಾಜ್, ಬಿ.ಎಂ. ಮಲ್ಲಿಕಾರ್ಜುನಯ್ಯ, ಬಿ.ದಿಳ್ಯಪ್ಪ, ಸಿ.ಜಿ. ಕಲ್ಲಪ್ಪ, ಕೆ.ಜಿ ರುದ್ರಗೌಡ, ಎನ್.ಮಹಾದೇವಪ್ಪ, ಬಿ.ಎನ್. ರಾಮರೆಡ್ಡಿ ಹಾಗೂ ಇತರರು ಭಾಗವಹಿಸಿದ್ದರು

## ವಿರೋಧ ಪಕ್ಷ ಹಿಮ್ಮೆಟ್ಟಿಸಲು ಸಜ್ಜಾಗಬೇಕು



**ಬಿಜೆಪಿ ಕಾರ್ಯಕರ್ತರಿಗೆ ಚಂದ್ರಶೇಖರ್ ಪೂಜಾರ್ ಕರೆ**

ಹರಿಹರ, ಏ. 14 - ಕೊರೊನಾ ಸಮಯದಲ್ಲಿ ಬಿಜೆಪಿ ಮುಖಂಡರು ಜನರ ಕಷ್ಟಗಳಿಗೆ ಸ್ಪಂದಿಸಿದ್ದೇವೆ. ಜೀವ ಉಳಿಸುವ ಕೆಲಸ ಮಾಡಿದ್ದೇವೆ ಎಂದು ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಹೇಳಿದರು.

ನಗರದ ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಬಿಜೆಪಿ ಪಕ್ಷದ ವತಿಯಿಂದ ನಾಮಪತ್ರ ಸಲ್ಲಿಸುವ ವಿಚಾರಕ್ಕೆ ಇಂದು ನಡೆದ ಸಭೆಯಲ್ಲಿ ಅವರು ಮಾತನಾಡಿದರು. ಮಾಜಿ ಶಾಸಕರು ನಮ್ಮ ವಿರುದ್ಧ ಮನಸೋ ಇಚ್ಛೆ ಟೀಕೆ ಟಿಪ್ಪಣಿ ಮಾಡುತ್ತಿದ್ದಾರೆ. ಜನರು ಅವರಿಗೆ ತಕ್ಕ ಉತ್ತರ ನೀಡಲು ಕಾಯುತ್ತಿದ್ದಾರೆ ಎಂದು ಪರೋಕ್ಷವಾಗಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ವಿರುದ್ಧ ಟೀಕಿಸಿದರು.

ಈಗ ರಾಜಕೀಯ ಯುದ್ಧ ಆರಂಭವಾಗಿದೆ. ನಮ್ಮ ಪಕ್ಷದ ಕಾರ್ಯಕರ್ತರು ವಿರೋಧ ಪಕ್ಷವನ್ನು ಹಿಮ್ಮೆಟ್ಟಿಸಲು ಸಜ್ಜಾಗಬೇಕು. ವೈಯಕ್ತಿಕ ಕೆಲಸವನ್ನು ಬದಿಗಿಟ್ಟು, ನಾವೇ ಅಭ್ಯರ್ಥಿ ಎಂದು ಭಾವಿಸಿ ಕೆಲಸ ಮಾಡಿದಾಗ ಬಿಜೆಪಿ ಗೆಲ್ಲಲು ಸಾಧ್ಯವಿದೆ ಎಂದರು.

## ಸಂವಿಧಾನಕ್ಕೆ ಎದುರಾಗಿರುವ ಬೆದರಿಕೆ ವಿರುದ್ಧ ಹೋರಾಟ ಅಗತ್ಯ: ಎಸ್ಸೆಸ್

ದಾವಣಗೆರೆ, ಏ.14- ಡಾ. ಅಂಬೇಡ್ಕರ್ ಅವರ ಚಿಂತನೆಯ ಪ್ರತಿರೂಪವಾಗಿರುವ ಸಂವಿಧಾನಕ್ಕೆ ಎದುರಾಗಿರುವ ಬೆದರಿಕೆಯ ವಿರುದ್ಧ ಹೋರಾಡುವುದೇ ಸಂವಿಧಾನ ಶಿಲ್ಪಿಗೆ ನಾವು ಸಲ್ಲಿಸುವ ಗೌರವ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಗೃಹ ಕಛೇರಿ ಶಿವಪಾರ್ವತಿಯಲ್ಲಿ ಇಂದು ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ|| ಬಿ.ಆರ್.ಅಂಬೇಡ್ಕರ್ ಅವರ 132ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅವರು ಮಾತನಾಡಿದರು.

ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವ ಸ್ಥಾಪನೆಯಾಗದೆ ರಾಜಕೀಯ ಪ್ರಜಾಪ್ರಭುತ್ವ ಬಾಳಲಾರದು. ನಿರ್ಲಕ್ಷ್ಯ, ತುಚ್ಛೀಕರಣ, ದೈವೀಕರಣದ ಮೂಲಕ ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ದಮನಿಸಲು ಪ್ರಯತ್ನಿಸಿ, ವಿಫಲರಾದ ಕೋಮುವಾದಿ ಶಕ್ತಿಗಳು ಈಗ ಬಾಬಾ ಸಾಹೇಬರನ್ನು ಆಪೋಶನ ತೆಗೆದುಕೊಂಡು ತಮ್ಮವರನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಹುನ್ನಾರದ ಬಗ್ಗೆ ನಾವು ಎಚ್ಚರವಾಗಿರಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಎಸ್.ಮಲ್ಲಿಕಾರ್ಜುನ, ಕಾಂಗ್ರೆಸ್ ಅಧ್ಯಕ್ಷ ಆಯೂಬ್, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಅನಿತಾಬಾಯಿ ಮಾಲತೇಶ್, ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಸಾಗರ್ ಎಲ್.ಹೆಚ್., ಮೈನುದ್ದೀನ್, ಪ್ರೊ|| ಸಿ.ಹೆಚ್.ಮುರುಗೇಂದ್ರಪ್ಪ, ರಂಗಸ್ವಾಮಿ, ತಿಪ್ಪೇಸ್ವಾಮಿ, ಶಾಮನೂರು ಕುಮಾರ್, ಟಿ.ರಮೇಶ್, ರಾಘವೇಂದ್ರ ಗೌಡ, ಆವರಗೆರೆ ಮಂಜು ಮತ್ತು ಇತರರು ಭಾಗವಹಿಸಿದ್ದರು.



## ವಿಮೋಚನ ವನಿತಾ ಸಮಾಜದಿಂದ ಬೇಸಿಗೆ ಶಿಬಿರ

ದಾವಣಗೆರೆ, ಏ.14- ಸ್ಥಳೀಯ ವನಿತಾ ಸಮಾಜದ ಅಂಗ ಸಂಸ್ಥೆ 'ವಿಮೋಚನ' ವತಿಯಿಂದ ಮಹಿಳೆಯರಿಗಾಗಿ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿದೆ.

ಶಿಬಿರದಲ್ಲಿ ಬ್ಯೂಟಿಷಿಯನ್ ತರಬೇತಿ ನಡೆಯಲಿದೆ. ಶ್ರೀಮತಿ ಸ್ಟೆಲ್ಲಾ ಗಾಯತ್ರಿ ಮತ್ತು ತಂಡದವರು ಈ ಶಿಬಿರವನ್ನು ನಡೆಸಿಕೊ ಡುವರು. ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವ ಮಹಿಳೆಯರು ವಿವರಕ್ಕಾಗಿ ಮೊಬೈಲ್ ಸಂಖ್ಯೆ 7760 34609 ಅಥವಾ 99642 73941 ರಲ್ಲಿ ಸಂಪರ್ಕಿಸಬಹುದು.

## ಸಾಮಾಜಿಕ ವ್ಯವಸ್ಥೆಯಲ್ಲಿ ಶಿಕ್ಷಕರ ಜವಾಬ್ದಾರಿ ಹೆಚ್ಚಿದೆ



**ಪ್ರೊ. ರಾಮಚಂದ್ರಪ್ಪ**

ದಾವಣಗೆರೆ, ಏ.14- ನಗರದ ನೂತನ ಶಿಕ್ಷಣ ಮಹಾವಿದ್ಯಾಲಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಕಾಲೇಜಿನ ಸಭಾಂಗಣದಲ್ಲಿ ಆಚರಿಸಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ. ಕೆ.ಎಸ್.ದಿವಾಕರ ನಾಯ್ಕ್, ಎಂದೆಂದಿಗೂ ಮರೆಯದ, ಮರೆಯಲಾಗದ ವ್ಯಕ್ತಿ ಪ್ರಪಂಚದಲ್ಲಿ ಹುಟ್ಟಿದ್ದರೆ ಅವರೇ ಡಾ. ಬಿ.ಆರ್. ಅಂಬೇಡ್ಕರ್. ದೇಶದ ಪ್ರಗತಿಗೆ ಮಾರಕವಾಗುವುದು ಜಾತಿ ಪದ್ಧತಿ. ವಿದ್ಯಾವಂತರಲ್ಲೇ ಹೆಚ್ಚು ಜಾತೀಯತೆ ತಾಂಡವವಾಡುತ್ತಿದೆ. ಬದುಕಲು ರಾಜಕೀಯಕ್ಕೆ ಬರಬೇಡಿ. ಬಡಜನರ ಬದುಕನ್ನು ಬದಲಾಯಿಸಲು ಬನ್ನಿ. ರಾಜಕೀಯ ಒಂದು ಸೇವೆ ಎಂದು ತಿಳಿಯಬೇಕೆಂದರು. ವ್ಯಕ್ತಿಯನ್ನು ಜಾತಿಯಿಂದ ಅಳೆಯದೇ ಅವರ ಮೌಲ್ಯಗಳಿಂದ ಅಳೆಯಬೇಕು ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹರಿಹರ ಎಸ್.ಜೆ.ವಿ.ಪಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಶಿಕ್ಷಕರ ಜವಾಬ್ದಾರಿ ಹೆಚ್ಚಿದೆ. ಯಾರು ಸಾಮಾಜಿಕ ನ್ಯಾಯದ ಪರವಾಗಿ ಇರುತ್ತಾರೆಯೋ ಅವರ ಹಾದಿ ಸುಗಮವಾಗಿರುವುದಿಲ್ಲ. ಸಮಾನ ಶಿಕ್ಷಣ, ಸಮಾನ ಅವಕಾಶಗಳಿಗೆ ಮುಖ್ಯ ಕಾರಣವೇ ಡಾ. ಬಿ.ಆರ್. ಅಂಬೇಡ್ಕರ್ ಎಂದು ಹೇಳಿದರು.

ಭಾರತ ಬಹುತ್ವದ ದೇಶ. ನಮ್ಮ ನಡುವೆ ತಾರತಮ್ಯಗಳು ಇರಬಾರದು. ಅಸಮಾನತೆಗಳನ್ನು ಹೋಗಲಾಡಿಸುವ ಪ್ರಯತ್ನವನ್ನು ನಾವು ಮಾಡಲೇ ಇಲ್ಲ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಅಧಿಕಾರ ಮತ್ತು ಸಂಪತ್ತು ಸಮಾನ ಹಂಚಿಕೆಯಾಗಬೇಕು. ಮಹಿಳೆಯರಿಗೆ ಸಮಾನ ಅವಕಾಶ ಕೊಡುವ ಉದ್ದೇಶ ಅವರದಾಗಿತ್ತು. ರಾಜಕಾರಣದೊಳಗೆ ಧರ್ಮವನ್ನು ಬೆರೆಸಬಾರದು. ಬೆರೆಸಿದರೆ ಕೋಮುವಾದಿಗಳು ಹಾಗೂ ಭಯೋತ್ಪಾದಕರ ಸಂಖ್ಯೆ ಹೆಚ್ಚಾಗುತ್ತದೆ ಎಂದರು.

ಪ್ರಶಿಕ್ಷಣಾರ್ಥಿ ಶ್ರೀಮತಿ ಸಿ.ಎಸ್. ಅನುಷಾಕುಮಾರಿ ಪ್ರಾರ್ಥಿಸಿದರು. ಕು. ಪಿ.ಜಿ. ಐಶ್ವರ್ಯ ಅತಿಥಿಗಳನ್ನು ಸ್ವಾಗತಿಸಿದರು. ಕು. ಪಿ. ಅನುಷಾ ಅತಿಥಿಗಳ ಪರಿಚಯ ಮಾಡಿದರೆ, ಕು. ಆಯೇಷಾ ಶಬನಮ್ ಹಾಗೂ ಎಂ. ಗೋಣಿಸ್ವಾಮಿ ಅಂಬೇಡ್ಕರ್ ಅವರ ಕುರಿತು ಭಾಷಣ ಮಾಡಿದರು.


ಕು. ಫಾತಿಮಾ ರುಕ್ಸಾರ್ ವಂದಿಸಿದರೆ, ಕು. ಆರ್.ವಿ. ಅಮೃತಾ ನಿರೂಪಿಸಿದರು.

## ಬಾಪೂಜಿ ಹೈ-ಟೆಕ್ ಕಾಲೇಜಿನಲ್ಲಿ ಶಿಬಿರ

ದಾವಣಗೆರೆ, ಏ.14- ವಾಣಿಜ್ಯ ವಿಭಾಗ, ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಶನ್ ಆಶ್ರಯದಲ್ಲಿ ಎರಡನೇ ಪ್ರಜ್ಞಾ, ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಇದೇ ದಿನಾಂಕ 18 ರಂದು "ಎಮರ್ಜಿಂಗ್ ಟ್ರೆಂಡ್ಸ್ ಇನ್ ಬ್ಯುಸಿನೆಸ್, ಟೆಕ್ನಾಲಜಿ ಅಂಡ್ ಎಜುಕೇಶನ್" ಎಂಬ ಶೀರ್ಷಿಕೆಯಲ್ಲಿ ನಡೆಸಲಾಗುವುದು.

ಆಸಕ್ತ ವಿದ್ಯಾರ್ಥಿಗಳು ಲೇಖನಗಳನ್ನು ಮಂಡಿಸಲು ವಿವರಗಳಿಗಾಗಿ ಪ್ರೊ. ನಾಗರಾಜ್ ಎಂ.ಎಸ್., ಮೊಬೈಲ್ ಸಂಖ್ಯೆ : 9964261851 ಅವರನ್ನು ಸಂಪರ್ಕಿಸುವುದು ಎಂದು ನಿರ್ದೇಶಕ ಸ್ವಾಮಿ ತ್ರಿಭುವಾನಂದ ಹೆಚ್.ವಿ. ತಿಳಿಸಿದ್ದಾರೆ.

### ದೊಡ್ಡಬಾತಿ ಗ್ರಾಮದ ದಾವಣಗೆರೆ ರಂಗಮ್ಮ ನಿಧನ



ದಾವಣಗೆರೆ ರುದ್ರಪ್ಪನವರ ಧರ್ಮಪತ್ನಿ ಶ್ರೀಮತಿ ರಂಗಮ್ಮ (70) ಅವರು ದಿನಾಂಕ 14.04.2023ರ ಶುಕ್ರವಾರ ಮಧ್ಯಾಹ್ನ 12ಗಂಟೆಗೆ ನಿಧನರಾದರು. ಪತಿ, ಏಳು ಜನ ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.04.2023ರ ಶನಿವಾರ ಬೆಳಿಗ್ಗೆ 11 ಗಂಟೆಗೆ ದೊಡ್ಡಬಾತಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಬಸವಣ್ಣನವರ ಆಶಯದಡಿ ಸಂವಿಧಾನ ರಚನೆ



**ಚಿತ್ರದುರ್ಗ : ಅಂಬೇಡ್ಕರ್ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಹೆಚ್. ಆಂಜನೇಯ**

ಚಿತ್ರದುರ್ಗ, ಏ.14- ಡಾ. ಬಿ.ಆರ್. ಅಂಬೇಡ್ಕರ್‌ರವರು ಸರ್ವ ಸಮುದಾಯಗಳಿಗೆ ಹಕ್ಕುಗಳನ್ನು ಕಲ್ಪಿಸಿಕೊಟ್ಟ ಮಹಾನ್ ನಾಯಕ. ಅವರು ರಚಿಸಿದ ವಿಶ್ವದ ಬಹುದೊಡ್ಡ ಲಿಖಿತ ಸಂವಿಧಾನ ಬಸವಣ್ಣನ ಆಶಯಗಳನ್ನೇ ಹೊಂದಿದೆ. ಭಾರತ ಸ್ವಾತಂತ್ರ ಗಳಿಸಿದ ನಂತರ ಪಂಡಿತ್ ನೆಹರು ಪ್ರಥಮ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ, ಸಂವಿಧಾನ ರಚನೆಗೆ ಅಂಬೇಡ್ಕರ್ ನೇತೃತ್ವದಲ್ಲಿ ಸಮಿತಿ ರಚಿಸಿದರು. ಅನೇಕ ವರ್ಷಗಳ ಅಧ್ಯಯನದ ಬಳಿಕ ದೇಶಕ್ಕೆ ಭದ್ರ ಬುನಾದಿ ಹಾಕುವ ರೀತಿ ಭೀಮ್‌ರಾವ್ ಅವರು ಸಂವಿಧಾನ ರಚಿಸಿ, ಜಗತ್ತಿನ ಗಮನ ಸೆಳೆದರು ಎಂದು ಮಾಜಿ ಸಚಿವ ಹೆಚ್. ಆಂಜನೇಯ ತಿಳಿಸಿದರು.

ಚಿತ್ರದುರ್ಗ ತಾಲ್ಲೂಕು ಶಿಬಾರ ಸಮೀಪದಲ್ಲಿ ಇಂದು ಆಯೋಜಿಸಿದ್ದ ಡಾ. ಬಿ. ಆರ್. ಅಂಬೇಡ್ಕರ್ ಜಯಂತಿ ಸರಳ ಆಚರಣೆಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಅಸಾಧಾರಣ ಜ್ಞಾನದ ವ್ಯಕ್ತಿ. ಬಹುಮುಖಿ ವ್ಯಕ್ತಿತ್ವ. ಶ್ರೇಷ್ಠ ಆರ್ಥಿಕ ತಜ್ಞ, ಸಾಮಾಜಿಕ ಪರಿವರ್ತನೆ ಹಾಗೂ ಸಮಾನತೆಯ ಹರಿಕಾರ ಎಂದೇ ಜಗತ್ತಿನಲ್ಲಿ ಗುರುತಿಸಿಕೊಂಡಿರುವ ಅಂಬೇಡ್ಕರ್, ಎಲ್ಲ ವರ್ಗದ ಹಿತಕ್ಕಾಗಿ ಅದರಲ್ಲೂ ಮಹಿಳೆಯರು, ಬಡವರು ಹಾಗೂ ಹಳ್ಳಿಗಳ ಜನರಿಗೆ ಉತ್ತಮ ಬದುಕು ಕಟ್ಟಿಕೊಡಬೇಕೆಂದು ಪ್ರತಿಪಾದಿಸಿದ ಮಹಾನ್ ನಾಯಕ. ಇಂತಹ ನಾಯಕನ ಜನ್ಮದಿನವನ್ನು ನಾವೆಲ್ಲರೂ ಆಚರಿಸಬೇಕೆಂದು ಬಣ್ಣಿಸಿದರು.

ದೇಶದ ಜನರಿಗೆ ಬೆಳಕಿನ ಕಡೆಗೆ ದಾರಿ ತೋರಿಸಿದ ಭೀಮ್‌ರಾವ್, ಹೆಣ್ಣುಮಕ್ಕಳಿಗೆ ಶಿಕ್ಷಣ, ಮತದಾನದ ಹಕ್ಕು, ಆಸ್ತಿ ಹಕ್ಕು ನೀಡಿದರು. ಹಳ್ಳಿ ಹಾಗೂ ಬಡ ಜನರ ಪ್ರಗತಿಗಾಗಿ ಜೀವನವನ್ನೇ ಮುಡಿಪಾಗಿಟ್ಟ ಮಹಾ ಮಾನವತಾವಾದಿ ಎಂದರು.

ದೇಶದಲ್ಲಿ ಎಲ್ಲ ವರ್ಗದವರ ಸಮಾನತೆಯ ಬದುಕಿನ ಹಿಂದೆ ಅಂಬೇಡ್ಕರ್ ಕೊಡುಗೆ ಇದೆ. ಸಂವಿಧಾನದ ಮೂಲಕ ಕತ್ತಲೆಯ ಜಗತ್ತಿಗೆ ಬೆಳಕು ನೀಡಿದ ಮಹಾನ್ ವ್ಯಕ್ತಿಯಾಗಿದ್ದಾರೆ. ಅವರನ್ನು ಸ್ಮರಿಸುವುದು ಭಾರತದ ಪ್ರತಿ ಪ್ರಜೆಯ ಹೊಣೆಯಾಗಿದೆ ಎಂದು ತಿಳಿಸಿದರು.

ನಿರಂತರ ಓದು, ಛಲದಿಂದ ಸಾಮಾನ್ಯ ಜನರು ಕೂಡ ಶಾಂತಿ ಮಾರ್ಗದಲ್ಲಿ ದೇಶಕ್ಕೆ ಬಹುದೊಡ್ಡ ಕೊಡುಗೆ ನೀಡಬಹುದು ಎಂಬುದಕ್ಕೆ ಬಸವಣ್ಣ, ಅಂಬೇಡ್ಕರ್ ಸೇರಿ ಅನೇಕ ಮಹನೀಯರ ಇತಿಹಾಸದಿಂದ ತಿಳಿಯಬಹುದು.

ಆದ್ದರಿಂದ ಪ್ರತಿಯೊಬ್ಬ ಪೋಷಕರು, ಬಡತನದ ನೆಪ ಮಾಡದೆ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಮುಂದಾಗಬೇಕು. ಶಿಕ್ಷಣದಿಂದ ಮಾತ್ರ ಕುಟುಂಬ, ಸಮಾಜ, ದೇಶದ ಸಮಗ್ರ ಬದಲಾ ವಣೆ ಸಾಧ್ಯ ಎಂಬ ವಾಸ್ತವತೆ ಅರಿತುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಅಂಬೇಡ್ಕರ್ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತಿತರ ಕ್ಷೇತ್ರಗಳಲ್ಲೂ ಸಾಧನೆಗೈದ ಭಾರತದ ಹೆಮ್ಮೆಯ ಪುತ್ರ. ಸವಾಲುಗಳನ್ನು ಮೆಟ್ಟಿ ಸಮಾಜಕ್ಕೆ ಕೊಡುಗೆ ನೀಡಬಹುದು ಎಂಬುದಕ್ಕೆ ಬಸವಣ್ಣ, ಕನಕದಾಸ, ವಾಲ್ಮೀಕಿ, ಶ್ರೀಕೃಷ್ಣ, ಅಂಬೇ ಡ್ಕರ್ ಹೀಗೆ ಅನೇಕ ಮಹನೀಯರ ಇತಿಹಾಸವನ್ನು ಸ್ಫೂರ್ತಿಯನ್ನಾಗಿಸಿ, ಪ್ರತಿ ವ್ಯಕ್ತಿ ಜೀವನದಲ್ಲಿ ಸಾಧನೆ ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ವೀರಶೈವ ಸಮುದಾಯ ಹಿರಿಯ ಮುಖಂಡ ಹೊಳಲ್ಕೆರೆ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕಾಟಿಹಳ್ಳಿ ಶಿವಣ್ಣ, ಎಂ.ಕೆ.ರುದ್ರಣ್ಣ, ಭೋವಿ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಗೋಡೆಮನೆ ಹನುಮಂತಪ್ಪ, ಮಾಜಿ ನಗರಸಭೆ ಸದಸ್ಯ ಸಿ.ಎನ್.ಕುಮಾರ್, ಮುಖಂಡರಾದ ಗಾದ್ರೇಶ್, ನಾಗರಾಜ್, ಸಂತೋಷ ಉಪಸ್ಥಿತರಿದ್ದರು.

## ಸುಶ್ರಾವ್ಯ ವಿದ್ಯಾಲಯದಿಂದ ಗೀತ ಗಾಯನ



ದಾವಣಗೆರೆ,ಏ.14- ನಗರದ ಸುಶ್ರಾವ್ಯ ಸಂಗೀತ ವಿದ್ಯಾಲಯ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಯುಕ್ತಾಶ್ರ ಯದಲ್ಲಿ ನಾಡಿದ್ದು ದಿನಾಂಕ 16ರಿಂದ ಇದೇ ದಿನಾಂಕ 22 ರವರೆಗೆ ಹೆಸರಾಂತ ಹಿರಿಯ ಕವಿ ಡಾ. ಹೆಚ್.ಎಸ್. ವೆಂಕಟೇಶಮೂರ್ತಿಯವರ ಗೀತೆಗಳ ಗಾಯನ ಶಿಬಿರ 'ನಿನಾದ-8' ನಡೆಯಲಿದೆ.

ಪ್ರತಿ ವರ್ಷ ನಿನಾದ - ಗೀತ ಗಾಯನ ತರಬೇತಿ ಶಿಬಿರ ಆಯೋಜಿಸುತ್ತಾ ಬಂದಿದ್ದು, ಕನ್ನಡದ ಕವಿಗಳ ಗೀತೆಗಳ ಗಾಯನ ತರಬೇತಿಯನ್ನು ಸಂಗೀತಾಸಕ್ತರಿಗೆ ನೀಡುತ್ತಿದೆ. ಈವರೆಗೆ 7 ಶಿಬಿರಗಳನ್ನು ನಡೆಸಿದ್ದು ವರಕವಿ ಬೇಂದ್ರೆ, ರಾಷ್ಟ್ರಕವಿ ಕುವೆಂಪು, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ, ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ, ಪದ್ಮಶ್ರೀ ನಿಸಾರ್ ಅಹಮದ್, ಪದ್ಮಶ್ರೀ ಡಾ. ದೊಡ್ಡರಂಗೇಗೌಡ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರುಗಳ ಗೀತೆಗಳ ತರಬೇತಿ ನೀಡಲಾಗಿದೆ.

ಈ ಬಾರಿ ಡಾ.ಹೆಚ್.ಎಸ್. ವೆಂಕಟೇಶಮೂರ್ತಿಯವರ ಆಯ್ದ 10 ಗೀತೆಗಳ ಗಾಯನವನ್ನು ಕರೋಕೆಯೊಂದಿಗೆ ಹಾಡುವ ತರಬೇತಿ ನೀಡಲಾಗು ವುದು. ಸುಶ್ರಾವ್ಯ ಸಂಗೀತ ವಿದ್ಯಾ ಲಯದ ನಿರ್ದೇಶಕರಾದ ಶ್ರೀಮತಿ ಯಶಾ ದಿನೇಶ್ ಪರಿ ಕಲ್ಪನೆಯಲ್ಲಿ ನಡೆಯಲಿರುವ ಶಿಬಿರದಲ್ಲಿ ಗಾಯನ ತರಬೇತಿ ಯೊಂದಿಗೆ ಕವಿ ಪರಿಚಯ, ಗಾದೆ, ಒಗಟು, ರಸಪ್ರಶ್ನೆ, ಮನೆಮದ್ದು ಮುಂತಾದ ಚಟುವಟಿಕೆಗಳು ಇರಲಿವೆ.

ಶಿಬಿರಾರ್ಥಿಗಳಿಗೆ ಹಾಡಿನ ಪುಸ್ತಕ, ಕರೋಕೆ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು. ಇದೇ ದಿನಾಂಕ 22 ರ ಸಂಜೆ 5ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಶಿಬಿರಾರ್ಥಿಗಳಿಂದ ಹಾಗೂ ದಾವಣಗೆರೆಯ ಗಾಯಕ-ಗಾಯಕಿಯರಿಂದ ಹೆಚ್ಚೆಸ್ವಿಯವರ ಭಾವಗೀತೆ, ಚಲನಚಿತ್ರಗೀತೆ ಹಾಗೂ ಧಾರಾವಾಹಿ ಶೀರ್ಷಿಕೆ ಗೀತೆಗಳ ಗಾಯನ ಜರುಗಲಿದೆ. ಶಿಬಿರಕ್ಕೆ ಸೇರಲು ಬಯಸುವ ಸಂಗೀತಾಸಕ್ತರು ಶ್ರೀಮತಿ ಸುಮ ಗುರುಬಸವರಾಜು (9481910353) ಸುಜಾತ ಬಸವರಾಜು (9611180596) ಅವರನ್ನು ಸಂಪರ್ಕಿಸಬಹುದು.

## ಸಾಣೇಹಳ್ಳಿಯಲ್ಲಿ 'ವಚನ ಸಂಸ್ಕೃತಿ' ಶಿಬಿರ

ಸಾಣೇಹಳ್ಳಿ, ಏ. 14- ಇಲ್ಲಿನ ಶ್ರೀ ತರಳಬಾಳು ಜಗದ್ಗುರು ಶಾಖಾ ಮಠದ ಪೀಠಾಧ್ಯಕ್ಷರಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರ ನೇತೃತ್ವದಲ್ಲಿ 'ವಚನ ಸಂಸ್ಕೃತಿ ಶಿಬಿರ'ವನ್ನು ಬರುವ ಮೇ 15 ರಿಂದ 24 ರವರೆಗೆ ಆಯೋಜಿಸಲಾಗಿದೆ.

ಈ ಶಿಬಿರದಲ್ಲಿ ನಾಡಿನ ಹೆಸರಾಂತ ಚಿಂತಕರು, ನಿಷ್ಠಾವಂತ ಧರ್ಮ ಗುರುಗಳು ಮತ್ತು ಸಾಧಕರು ಭಾಗವಹಿಸಿ, ವಚನ ತತ್ವಗಳನ್ನು ಬದುಕಿನಲ್ಲಿ ಕ್ರಿಯಾತ್ಮಕವಾಗಿ ಅಳವಡಿಸಿಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡಲಿದ್ದಾರೆ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರ ನೇತೃತ್ವ ಹಾಗೂ ಬಸವ ರಾಜ ಸಾದರ ಅವರ ನಿರ್ದೇಶಕತ್ವದಲ್ಲಿ ಈ ಕಮ್ಮಟವು ನಡೆಯಲಿದೆ.

20 ರಿಂದ 30 ವರ್ಷದೊಳಗಿನ ಎಸ್‌ಎಸ್‌ಎಲ್‌ಸಿ ಅಥವಾ ಹೆಚ್ಚಿನ ವಿದ್ಯಾಭ್ಯಾಸ ಮಾಡಿರುವ 100 ಯುವಕ-ಯುವತಿಯರು ಇದರಲ್ಲಿ ಭಾಗವಹಿಸಲು ಅವಕಾಶವಿದೆ. ಸ್ತ್ರೀ-ಪುರುಷ, ಜಾತಿ-ಮತ-ಧರ್ಮ ಇಂಥ ಯಾವುದೇ ಮಿತಿಗಳಿಲ್ಲ. ಊಟ ಮತ್ತು ವಸತಿ ಉಚಿತವಿದೆ. ಪ್ರತಿದಿನ ಮುಂಜಾವಿನಿಂದ ರಾತ್ರಿ ಹತ್ತರ ವರೆಗೂ ತರಬೇತಿ ನಡೆಯುವುದರಿಂದ ಶಿಬಿರಾರ್ಥಿಗಳು ಸಾಣೇಹಳ್ಳಿಯಲ್ಲಿಯೇ ಇರುವುದು ಕಡ್ಡಾಯವಾಗಿದೆ.

ಕಮ್ಮಟದಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಯುವಕ-ಯುವತಿಯರು ತಮ್ಮ ವೈಯಕ್ತಿಕ ವಿವರಗಳೊಂದಿಗೆ 1-5-2023ರ ಒಳಗಾಗಿ ಅರ್ಜಿ ಸಲ್ಲಿಸಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಮಾಹಿತಿಗೆ ಸಂಚಾಲಕರಾದ ಐ. ಜಿ. ಚಂದ್ರಶೇಖರಯ್ಯ (9481329313), ಹೆಚ್. ಎಸ್. ದ್ಯಾಮೇಶ್ (9449649 850) ಟಿ.ಎಂ.ಮರುಳಸಿದ್ಧಯ್ಯ (9663 177254) ಸಂಪರ್ಕಿಸಬಹುದು.

# ಬಿಜೆಪಿ ದುರಾಡಳಿತದಿಂದ ವರ್ತಕರು-ಗ್ರಾಹಕರು ಸಂಕಷ್ಟದಲ್ಲಿ

## 18ನೇ ವಾರ್ಡ್‌ನಲ್ಲಿ ಮನೆ ಮನೆಗೆ ತೆರಳಿ ಪ್ರಚಾರ ನಡೆಸಿದ ಕಾಂಗ್ರೆಸ್ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ

ದಾವಣಗೆರೆ, ಏ.14- ಬಿಜೆಪಿ ದುರಾಡಳಿತದಿಂದ ವರ್ತಕರು, ಗ್ರಾಹಕರು ಸಂಕಷ್ಟಕ್ಕೆ ಸಿಲುಕಿದ್ದು, ಪ್ರತಿಯೊಬ್ಬರು ಸಂಕಟ ಪಡುತ್ತಿದ್ದಾರೆ. ಇಂತಹ ದುರಾಡಳಿತಕ್ಕೆ ಬ್ರೇಕ್ ಹಾಕುವ ಕಾಲ ಬಂದಿದೆ ಎಂದು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ನಗರದ 18ನೇ ವಾರ್ಡ್‌ನ ವಿವಿಧ ಭಾಗಗಳಲ್ಲಿ ಮನೆ-ಮನೆಗೆ ತೆರಳಿ ನಡೆಸಿದ ಪ್ರಚಾರ ಕಾರ್ಯಕ್ರಮದ ಸಂದರ್ಭದಲ್ಲಿ ಅವರು ಮಾತನಾಡಿದರು.

ಗಾಂಧಿನಗರದ ಸಂವಿಧಾನ ಶಿಲ್ಪಿ ಡಾ|| ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ನಂತರ ಗಡಿಯಾರ ಕಂಬದ ಬಳಿಯ ಶ್ರೀ ಗಣೇಶ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಕಾಯಿಪೇಟೆ, ಭಲವಾದಿ ಕೇರಿ ಸೇರಿದಂತೆ ವಿವಿಧ ಭಾಗಗಳಲ್ಲಿ ಎಸ್ಸೆಸ್ ಮತ ಯಾಚಿಸಿದರು.



ದೇಶದ ಚಿತ್ರಣವನ್ನೇ ಬದಲಾವಣೆ ಮಾಡುತ್ತೇನೆಂದು ಹೇಳಿದ ಬಿಜೆಪಿಗರು ಇಂದು ದೇಶವನ್ನು ಮಾರಾಟಕ್ಕೆ ಇಟ್ಟಿದ್ದಾರೆ. ಸುಳ್ಳುಗಳನ್ನು ಹೇಳಿ ಅಧಿಕಾರಕ್ಕೆ ಬಂದವರು ಜನಸಾಮಾನ್ಯರಿಗೆ ಒಳಿತು ಮಾಡದೇ ಕೇವಲ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ದೂರಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮಾಜಿ ಸದಸ್ಯ ಪಿ.ಎನ್.ಚಂದ್ರಶೇಖರ್, ವಾರ್ಡ್ ಅಧ್ಯಕ್ಷ ಗುಡಳ್ಳಿ ಪರಮೇಶ್, ಬೆಲ್ಲದ ಶಂಕರ್, ಭಲವಾದಿ ಕೇರಿ ಗಿರೀಶ್, ಸಾವನ್ ಜೈನ್, ಬನ್ನಿಕಟ್ಟಿ ಸಚಿನ್, ಸುಧಾಕರ್ ಮಾನೆ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ನಗರಸಭೆ ಮಾಜಿ ಅಧ್ಯಕ್ಷ ಬಿ.ವೀರಣ್ಣ, ಕಾಂಗ್ರೆಸ್ ಅಧ್ಯಕ್ಷ ಆಯೂಬ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಮಲ್ಲಿಕಾರ್ಜುನ, ನಗರಸಭೆ ಮಾಜಿ ಅಧ್ಯಕ್ಷ ಎಂ.ಮಂಜುನಾಥ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಅನಿತಾಬಾಯಿ ಮಾಲತೇಶ್, ಶುಭಮಂಗಳ, ಓಬಿಸಿ ರಾಜ್ಯ ಕಾರ್ಯದರ್ಶಿ ಜಮ್ನಳ್ಳಿ ನಾಗರಾಜ್, ಚಂದ್ರು ದೀಟೂರು, ಮುಖಂಡರುಗಳಾದ ನರಸಿಂಹಣ್ಣ, ನಲ್ಲೂರು ರಾಘವೇಂದ್ರ, ಕರೆಶಿವಪ್ಪ ಸಿದ್ದಣ್ಣ, ಮಕಬುಲ್, ಕಾಶಿನಾಥ್, ಸೊಸೈಟಿ ಸಂಜು, ರುದ್ರಪ್ಪ, ರಾಜೇಶ್, ನಾಗರಾಜ್ ಭಟ್, ಕುಮಾರ್ ಪಾಲ್ ಜೈನ್, ಶಿವಯೋಗಿ, ಶಬರೀಶ್, ಕಿರಣ್, ಗಣೇಶ್, ರಾಜು ಭಂಡಾರಿ, ಪ್ರಕಾಶ್ ಗಾಯಕವಾಡ, ಪ್ರಭಾಕರ ಹೆಗಡೆ, ರಾಘವೇಂದ್ರ ಶೆಟ್ಟಿ, ಅಮರೇಶ್, ಅಭಿಷೇಕ್ ಗುಪ್ತ, ಲೋಕೇಶ್, ಸಲೀಂ ಸಾಬ್, ಇನಾಯತ್ ಉಲ್ಲಾ, ಹರಿಹರ ಎಂ. ನಾಗರಾಜ್, ಮಂಜುನಾಥ್ ಕರೆಶಿವಪ್ಪ, ತೆಲಿಗಿ ಸಿದ್ದಲಿಂಗಪ್ಪ, ಬಾಳೆಹೊಲದ ರೇವಣಸಿದ್ದಪ್ಪ ಮತ್ತು ಇತರರು ಭಾಗವಹಿಸಿದ್ದರು.

## ಲೋಕಾಯುಕ್ತ ಕಚೇರಿ ಸ್ಥಳಾಂತರ



ದಾವಣಗೆರೆ, ಏ. 14- ಲೋಕಾಯುಕ್ತ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರ ಕಚೇರಿ ಮತ್ತು ಅಧೀಕ್ಷಕರವರ ಕಚೇರಿಯನ್ನು ನಗರದ ಹಳೇ ಕೋರ್ಟ್ ರಸ್ತೆಯಲ್ಲಿರುವ ರತ್ನಮ್ಮ ಮಹಿಳಾ ಹಾಸ್ಟೆಲ್ ಎದುರುಗಡೆಯಿರುವ ಉಪವಿಭಾಗಾಧಿಕಾರಿಗಳ ವಸತಿ ಗೃಹ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಸರ್ಕಾರಿ ಕಚೇರಿಯಲ್ಲಿ ಸರ್ಕಾರಿ ಕೆಲಸ ಮಾಡಲು ವಿಳಂಬ ಅಥವಾ ಹಣದ ಬೇಡಿಕೆ ಇಟ್ಟಲ್ಲಿ ಸಾರ್ವಜನಿಕರು ಲೋಕಾಯುಕ್ತ ಕಚೇರಿ/ಠಾಣೆ ಯಲ್ಲಿ ದೂರು ಸಲ್ಲಿಸಬಹುದು ಹಾಗೂ ಪೊಲೀಸ್ ನಿರೀಕ್ಷಕರು-1 ಮೊ.ನಂ. 93640-62652, ಪೊಲೀಸ್ ನಿರೀಕ್ಷಕರು-2 ಮೊ. 93640-62653, ಪೊಲೀಸ್ ನಿರೀಕ್ಷಕರು-3 ಮೊ.ನಂ.93640-62654 ಗೆ ಸಂಪರ್ಕಿಸಿ ಮಾಹಿತಿ ನೀಡಲು ಜಿಲ್ಲೆಯ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪುರೆ ತಿಳಿಸಿದ್ದಾರೆ.

# ನಾಲ್ಕು ಜನ ಪಕ್ಷ ಬಿಟ್ಟರೆ ನಷ್ಟವಿಲ್ಲ



ಬೆಂಗಳೂರು, ಏ. 14 - ಯಾರೋ ನಾಲ್ಕು ಜನ ಪಕ್ಷ ಬಿಟ್ಟು ಹೋದರೆ ಪಕ್ಷಕ್ಕೆ ಏನೂ ನಷ್ಟವಿಲ್ಲ. ಆದರೆ, ನಮ್ಮ ಪಕ್ಷದಿಂದ ಹೊರ ಹೋದವರಿಗೆ ಪಕ್ಷದ ಬಾಗಿಲು ಶಾಶ್ವತವಾಗಿ ಮುಚ್ಚಲಿದೆ ಎಂದು ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಇಂದಿಲ್ಲಿ ಎಚ್ಚರಿಸಿದ್ದಾರೆ.

ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಸೇರಿದಂತೆ, ಕೆಲವು ಪ್ರಮುಖ ಮುಖಂಡರು ಪಕ್ಷ ತೊರೆದಿದ್ದರೆ, ಮತ್ತಷ್ಟು ಮಂದಿ ಅದೇ ದಾರಿ ತುಳಿಯಲು ಮುಂದಾಗಿದ್ದಾರೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಈ ಸಂದೇಶ ನೀಡಿದ್ದಾರೆ.

ಪಕ್ಷದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲಕ್ಷ್ಮಣ್ ಸವದಿ ಕಳೆದ ಬಾರಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅಥಣಿ ಕ್ಷೇತ್ರದಲ್ಲಿ ಸೋತಿದ್ದರೂ ಪಕ್ಷ ಅವರನ್ನು ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಿ ಉಪ ಮುಖ್ಯಮಂತ್ರಿಯನ್ನಾಗಿ ಮಾಡಿತ್ತು. ಆದರೂ ಟಿಕೆಟ್ ಸಿಕ್ಕಿಲ್ಲ ಎನ್ನುವ ಒಂದೇ ಕಾರಣಕ್ಕೆ ಅವರು ಪಕ್ಷ ತೊರೆದಿದ್ದಾರೆ.

ಇದರಿಂದ ನಮ್ಮ ಕಾರ್ಯಕರ್ತರಿಗೆ ನೋವಾಗುತ್ತದೆ. ಈಗ ಅವರು ಜಗಳಗಂಟ ಪಕ್ಷಕ್ಕೆ ಹೋಗುತ್ತಿದ್ದಾರೆ. ಆದರೆ, ಕಾಂಗ್ರೆಸ್‌ನಲ್ಲಿ ಅವರಿಗೆ ಭವಿಷ್ಯ ಇಲ್ಲ ಎಂದು ಹೇಳಿದರು.

ಇಷ್ಟು ವರ್ಷ ಅವರು ಬಿಜೆಪಿಯಲ್ಲಿ ಇದ್ದವರು ಕಾಂಗ್ರೆಸ್‌ಗೆ ಸೇರುವ ನಿರ್ಧಾರ ಮಾಡಬಾರದಿತ್ತು. ಬಿಜೆಪಿ ಬಿಟ್ಟು ಲಕ್ಷ್ಮಣ ಸವದಿ ಬಹಳ ದೊಡ್ಡ ತಪ್ಪು ಮಾಡಿದ್ದಾರೆ.

ನಮ್ಮವರು ಕಾಂಗ್ರೆಸ್‌ಗೆ ಹೋದ ಮೇಲೆ ಪಶ್ಚಾತ್ತಾಪ ಪಡುತ್ತಾರೆ ಎಂದು ಅರುಣ್ ಸಿಂಗ್ ಗುಳೇ ಹೋಗುತ್ತಿರುವವರ ಬಗ್ಗೆ ಹರಿಹಾಯ್ದರು.

ಯಾರೋ ನಾಲ್ಕು ಜನ ಪಕ್ಷ ಬಿಟ್ಟು ಹೋದರೆ ಪಕ್ಷಕ್ಕೆ ಏನೂ ನಷ್ಟ ಆಗಲ್ಲ. ಆದರೆ, ಹೋಗುವವರು ದುಡುಕಿನ ನಿರ್ಧಾರ ತಗೊಂಡು ಹೋಗಿದ್ದಾರೆ ಎಂದರು.

ಟಿಕೆಟ್ ದೊರೆಯಲಿಲ್ಲ ಎಂಬ ಕಾರಣಕ್ಕೆ ಪಕ್ಷ ತೊರೆಯುತ್ತಿರುವವರ ನಿರ್ಧಾರ ಸ್ವಾರ್ಥದಿಂದ ಕೂಡಿದೆ ಎಂದು ಕಟುವಾಗಿ ಟೀಕಿಸಿದರು. ಈ ಬಾರಿ ರಾಜ್ಯ ವಿಧಾನಸಭಾ ಚುನಾವಣೆಗೆ ಹೊಸ ಪೀಳಿಗೆಗೆ ಅವಕಾಶ ನೀಡಿದ್ದೇವೆ. ಬಿಜೆಪಿಯನ್ನು ಹೊಸ ತಲೆಮಾರಿನ ಪಾರ್ಟಿಯನ್ನಾಗಿ ಮಾಡುತ್ತಾ ಇದ್ದೇವೆ. ಹೀಗಾಗಿ ಹೊಸ ಮುಖಗಳಿಗೆ ಅವಕಾಶ ನೀಡಿದ್ದೇವೆ ಎಂದು ಹೊಸ ಪ್ರಯೋಗ ನಡೆಸಿ ಕೆಲವರಿಗೆ ಕೋಕ್ ನೀಡಿದ ಹೈಕಮಾಂಡ್ ನಿರ್ಧಾರವನ್ನು ಅರುಣ್ ಸಿಂಗ್ ಸಮರ್ಥಿಸಿಕೊಂಡರು.

## ನಿವೃತ್ತರನ್ನು ಹೈಕೋರ್ಟ್ ಜಡ್ಜ್ ಆಗಿ ನೇಮಿಸಲು ಕೊಲೀಜಿಯಂ ಶಿಫಾರಸ್ಸು


ನವದೆಹಲಿ, ಏ. 14 - ನಿವೃತ್ತ ಜಿಲ್ಲಾ ನ್ಯಾಯಮೂರ್ತಿಯನ್ನು ಮಧ್ಯ ಪ್ರದೇಶದ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಿಸಲು ಸುಪ್ರೀಂ ಕೋರ್ಟ್ ಕೊಲೀಜಿಯಂ ಶಿಫಾರಸ್ಸು ಮಾಡಿದೆ. ನ್ಯಾಯಮೂರ್ತಿ ರೂಪೇಶ್ ಚಂದ್ರ ವರ್ಷಣೆ ಅವರನ್ನು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಿಸಲು ನಿರ್ಧರಿಸಲಾಗಿದೆ. ಈ ಹಿಂದೆ 1980ರಲ್ಲಿ ನ್ಯಾಯಮೂರ್ತಿ ಬಹರುಲ್ ಇಸ್ಲಾಂ ಹಾಗೂ 1989ರಲ್ಲಿ ನ್ಯಾಯಮೂರ್ತಿ ಫಾತಿಮಾ ಬೀವಿ ಅವರ ನಿವೃತ್ತಿಯ ನಂತರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಿಸಲಾಗಿತ್ತು.

## ಹರಪನಹಳ್ಳಿಗೆ ಜೆಡಿಎಸ್ ಅಭ್ಯರ್ಥಿಯಾಗಿ ನೂರ್‌ಅಹ್ಮದ್



ಹರಪನಹಳ್ಳಿ, ಏ. 14 - ಹರಪನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಜೆಡಿಎಸ್ ಅಭ್ಯರ್ಥಿಯಾಗಿ ಎನ್.ಎಂ.ನೂರ್ ಅಹ್ಮದ್ ಅವರನ್ನು ಜೆಡಿಎಸ್ ವರಿಷ್ಠ, ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಘೋಷಿಸಿದ್ದಾರೆ. ಶುಕ್ರವಾರ ಸಂಜೆ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಗೊಳಿಸಿದ ಜೆಡಿಎಸ್ ಎರಡನೆಯ ಪಟ್ಟಿಯಲ್ಲಿ ಕೂಡ್ಲಿಗಿ ಕ್ಷೇತ್ರದ ಮಾಜಿ ಸಚಿವ ಎನ್.ಎಂ. ನಬೀ ಸಾಹೇಬ್ ಅವರ ಪುತ್ರ ಎನ್.ಎಂ.ನೂರ್ ಅಹ್ಮದ್ ಅವರಿಗೆ ಹರಪನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಜೆಡಿಎಸ್ ಟಿಕೆಟ್ ಘೋಷಣೆ ಮಾಡಲಾಗಿದೆ.

## ಜಿಲ್ಲೆಯ 26 ಜನರಲ್ಲಿ ಕೋವಿಡ್



ದಾವಣಗೆರೆ, ಏ. 14- ಜಿಲ್ಲೆಯಲ್ಲಿ 26 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡ ಬಗ್ಗೆ ವರದಿಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 6, ಹರಿಹರ 2, ಜಗಳೂರು 5, ಚನ್ನಗಿರಿ 5 ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ 8 ಜನರಲ್ಲಿ ಸೋಂಕು ದೃಢಪಟ್ಟಿದೆ. ಇಂದು 8 ಜನರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 104 ಸಕ್ರಿಯ ಪ್ರಕರಣಗಳಿವೆ.

# ಆನಂದಪ್ಪಗೆ ಜೆಡಿಎಸ್ ಟಿಕೆಟ್



ಕುತೂಹಲ ಮೂಡಿಸಿದ್ದ ಹಾಸನ ಕ್ಷೇತ್ರಕ್ಕೆ ಸ್ವರೂಪ್‌ಗೆ ಟಿಕೆಟ್ : ಭವಾನಿ ರೇವಣ್ಣಗೆ ಟಿಕೆಟ್ ನಿರಾಕರಣೆ

(1ನೇ ಪುಟದಿಂದ) ಹಾಸನ ಕ್ಷೇತ್ರದ ಪ್ರಬಲ ಆಕಾಂಕ್ಷಿಯಾಗಿದ್ದ ಭವಾನಿ ರೇವಣ್ಣ ಅವರಿಗೆ ಟಿಕೆಟ್ ನಿರಾಕರಿಸುವ ಮೂಲಕ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಸಹೋದರ ಹೆಚ್.ಡಿ.ರೇವಣ್ಣ ಅವರ ಒತ್ತಡಕ್ಕೆ ಮಣಿದಿಲ್ಲ ಎಂಬುದನ್ನು ಸಾಬೀತು ಪಡಿಸಿದ್ದಾರೆ. ಮೊದಲೇ ಘೋಷಿಸಿದಂತೆ ಸ್ವರೂಪ್ ಅವರನ್ನು ಹಾಸನ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಪ್ರಕಟಿಸಲಾಗಿದೆ.

ಕಾಂಗ್ರೆಸ್ ತೊರೆದು ಜೆಡಿಎಸ್ ಗೆ ಮರಳಿದ ವೈಎಸ್ ವಿ ದತ್ತ ಅವರಿಗೆ ಕಡೂರು ಕ್ಷೇತ್ರದ ಟಿಕೆಟ್ ನೀಡಲಾಗಿದೆ. ಡಿಸೆಂಬರ್‌ನಲ್ಲೇ 93 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಪ್ರಕಟಿಸಿದ್ದ ಜೆಡಿಎಸ್ ಎರಡನೇ ಪಟ್ಟಿಯಲ್ಲಿ 50 ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಿದೆ. ಒಟ್ಟು 143 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗಿದ್ದು, ಇನ್ನೂ 81 ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯನ್ನು ಬಾಕಿ ಉಳಿಸಿಕೊಳ್ಳಲಾಗಿದೆ.



ಕಾಂಗ್ರೆಸ್ ತೊರೆದು ಜೆಡಿಎಸ್ ಗೆ ಮರಳಿದ ವೈಎಸ್‌ವಿ ದತ್ತ ಅವರಿಗೆ ಕಡೂರು ಕ್ಷೇತ್ರದ ಟಿಕೆಟ್

ಜೆಡಿಎಸ್ ಪಕ್ಷದ ಕೇಂದ್ರ ಕಚೇರಿ ಜೆಪಿ ಭವನದಲ್ಲಿಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ವಿಧಾನಸಭೆ ಚುನಾವಣೆಯ ಎರಡನೇ ಪಟ್ಟಿ ಬಿಡುಗಡೆ ಮಾಡಿದರು.

ಕುಡುಚಿ (ಎಸ್.ಸಿ)-ಆನಂದ ಮಾಳಗಿ, ರಾಯಭಾಗ (ಎಸ್.ಸಿ)- ಪ್ರದೀಪ ಮಾಳಗಿ, ಸವದತ್ತಿ ಯಲ್ಲಮ್ಮ- ಸೌರಭ ಆನಂದ ಚೋಪ್ರಾ, ಅಥಣಿ- ಶ್ರೀ ಶಶಿಕಾಂತ ಪಡಸಲಗಿ ಗುರುಗಳು, ಹುಬ್ಬಳ್ಳಿ-ಧಾರವಾಡ ಪೂರ್ವ (ಎಸ್.ಸಿ)-ವೀರಭದ್ರಪ್ಪ ಹಾಲರವಿ, ಕುಮಟಾ- ಸೂರಜ್ ಸೋನಿ ನಾಯಕ, ಹಳಿಯಾಳ- ಎಸ್.ಎಲ್.ಘೋಟ್ನೇಕರ್, ಭಟ್ಕಳ- ನಾಗೇಂದ್ರ ನಾಯಕ್, ಶಿರಸಿ-ಸಿದ್ದಾಪುರ- ಉಪೇಂದ್ರ ಪೈ, ಯಲ್ಲಾಪುರ-ಡಾ.ನಾಗೇಶ ನಾಯಕ್, ಚಿತ್ತಾಪುರ (ಎಸ್.ಸಿ)- ಸುಭಾಷ್‌ಚಂದ್ರ ರಾಥೋಡ, ಕಲ್ಬುರ್ಗಿ ಉತ್ತರ-ನಾಸೀರ್ ಹುಸೇನ್ ಉಸ್ತಾದ್, ಬಳ್ಳಾರಿ ನಗರ- ಅಲ್ಲಾಭಕ್ಷ ಅಯಾಜ್ ಮುನ್ನಾ, ಹಗರಿಬೊಮ್ಮನಹಳ್ಳಿ (ಎಸ್.ಸಿ)- ಪರಮೇಶ್ವರಪ್ಪ, ಹರಪನಹಳ್ಳಿ- ಎನ್.ಎಂ. ನೂರ್ ಅಹ್ಮದ್, ಸಿರಗುಪ್ಪ (ಎಸ್.ಟಿ)- ಪರಮೇಶ್ವರ ನಾಯಕ, ಕಂಪ್ಲಿ (ಎಸ್.ಟಿ)- ರಾಜು ನಾಯಕ್, .ಕೊಳ್ಳೇಗಾಲ (ಎಸ್.ಸಿ)-ಪುಟ್ಟಸ್ವಾಮಿ, ಗುಂಡ್ಲುಪೇಟೆ- ಕಡಬೂರು ಮಂಜುನಾಥ, ಕಾಪು- ಸಬೀನಾ ಸಮದ್, ಕಾರ್ಕಳ- ಶ್ರೀಕಾಂತ ಕೊಚ್ಚೂರ್, ಉಡುಪಿ- ದಕ್ಷತ್ ಆರ್. ಶೆಟ್ಟಿ, ಬೈಂದೂರು-ಮನ್ಸೂರ್ ಇಬ್ರಾಹಿಂ, ಕುಂದಾಪುರ-ರಮೇಶ್ ಕುಂದಾಪುರ, ಮಂಗಳೂರು ದಕ್ಷಿಣ- ಸುಮತಿ ಹೆಗಡೆ, ಕನಕಪುರ- ನಾಗರಾಜ, ಯಲಹಂಕ- ಎಂ.ಮುನೇಗೌಡ, ಸರ್ವಜ್ಞನಗರ- ಮೊಹ್ಮದ್ ಮುಸ್ತಾಫ್, ಯಶವಂತರ- ಜವರಾಯಿಗೌಡ, ತಿಪಟೂರು- ಶಾಂತಕುಮಾರ, ಶಿರಾ- ಆರ್. ಉಗ್ರೇಶ್, ಹಾನಗಲ್- ಮನೋಹರ್ ತಹಸೀಲ್ದಾರ್, ಸಿಂದಗಿ- ವಿಶಾಲಾಕ್ಷಿ ಶಿವಾನಂದ, ಗಂಗಾವತಿ-ಹೆಚ್.ಆರ್.ಚನ್ನಕೇಶವ, ಹೆಚ್.ಡಿ. ಕೋಟೆ (ಎಸ್.ಟಿ)- ಜಯಪ್ರಕಾಶ್ ಸಿ., ಜೇವರ್ಗಿ- ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ, ಶಹಾಪೂರ-ಗುರುಲಿಂಗಪ್ಪಗೌಡ, ಕಾರವಾರ- ಚೈತ್ರಾ ಕೋಟಕಾರ್, ಪುತ್ತೂರು- ದಿವ್ಯಾ ಪ್ರಭಾ, ಕಡೂರು- ವೈ.ಎಸ್.ವಿ ದತ್ತ, ಹೊಳೆನರಸೀಪುರ- ಹೆಚ್.ಡಿ. ರೇವಣ್ಣ, ಬೇಲೂರು- ಕೆ. ಎಸ್.ಲಿಂಗೇಶ್, ಸಕಲೇಶಪುರ- ಹೆಚ್. ಕೆ. ಕುಮಾರಸ್ವಾಮಿ, ಅರಕಲಗೂಡು- ಎ. ಮಂಜು, ಹಾಸನ- ಸ್ವರೂಪ್ ಪ್ರಕಾಶ್, ಶ್ರವಣಬೆಳಗೊಳ- ಸಿ.ಎನ್. ಬಾಲಕೃಷ್ಣ, ಮಹಾಲಕ್ಷ್ಮಿ ಲೇಔಟ್- ರಾಜಣ್ಣ, ಹಿರಿಯೂರು- ರವೀಂದ್ರಪ್ಪ, ಮಾಯಕೊಂಡ (ಎಸ್.ಸಿ)- ಆನಂದಪ್ಪ, ಸೊರಬ- ಚಂದ್ರೇಗೌಡ

# ಚಿಹ್ನೆ ಉಳಿಕೆಗೆ ಸಿಪಿಐ ಯತ್ನ

(1ನೇ ಪುಟದಿಂದ) ಪಕ್ಷ ಸಿ.ಪಿ.ಐ. ಆಗಿದೆ. ಯಾವುದೇ ರಾಜ್ಯದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಸ್ಥಾಪಿಸಿದ ಮೊದಲ ಪಕ್ಷ ಸಹ ಸಿ.ಪಿ.ಐ. ಆಗಿದೆ. ನಂತರದಲ್ಲಿ ಪಕ್ಷ ಹಲವಾರು ಸರ್ಕಾರಗಳಲ್ಲಿ ಭಾಗಿಯಾಗಿದೆ.

ರಾಷ್ಟ್ರೀಯ ಪಕ್ಷಗಳೆಂಬ ಮಾನ್ಯತೆ ಹೊಂದಿರುವ ಪಕ್ಷಗಳು, ದೇಶದ ಯಾವುದೇ ಚುನಾವಣೆಯಲ್ಲಿ ಒಂದೇ ಚಿಹ್ನೆಯಲ್ಲಿ ಸ್ಪರ್ಧಿಸಬಹುದಾಗಿದೆ. ಆದರೆ, ಈ ಮಾನ್ಯತೆ ಇರದ ಪಕ್ಷಗಳು, ರಾಜ್ಯದಲ್ಲೂ ಮಾನ್ಯತೆ ಇಲ್ಲವಾದರೆ ಸ್ಪರ್ಧಿಸಲು ಒಂದೇ ಚಿಹ್ನೆ ಪಡೆಯಲು ಚುನಾವಣಾ ಆಯೋಗದ ಅನುಮತಿ ಪಡೆಯಬೇಕಾಗುತ್ತದೆ. ಚುನಾವಣೆಯಲ್ಲಿ ಕುಡುಗೋಲು ತೆನ್ನೆ ಚಿಹ್ನೆಯನ್ನು ಕೇಳಲಿದ್ದೇವೆ. 1952 ರಿಂದಲೂ ಸಿ.ಪಿ.ಐ. ಇದೇ ಚಿಹ್ನೆಯಲ್ಲಿ ಸ್ಪರ್ಧಿಸುತ್ತಾ ಬಂದಿದೆ ಎಂದು ವಿಶ್ವಂ ಹೇಳಿದ್ದಾರೆ.

ಪಶ್ಚಿಮ ಬಂಗಾಳ ಹಾಗೂ ಒಡಿಶಾಗಳಲ್ಲಿ ಸಿ.ಪಿ.ಐ. ಹೊಂದಿದ್ದ ರಾಜ್ಯ ಪಕ್ಷದ ಸ್ಥಾನ ಕಳೆದುಕೊಂಡಿದೆ. ಕೇರಳ, ಮಣಿಪುರ ಹಾಗೂ ತಮಿಳುನಾಡುಗಳಲ್ಲಿ ಮಾತ್ರ ಈ ಸ್ಥಾನ ಹೊಂದಿದೆ.

## ಹಾಲಿನ ಉತ್ಪನ್ನಗಳ ಆಮದಿಲ್ಲ : ಕೇಂದ್ರ

(1ನೇ ಪುಟದಿಂದ) ಹೆಚ್ಚಾಗಿದೆ. ಆದರೆ, ದೇಶದಲ್ಲೇ ಹಾಲಿನ ಪೂರೈಕೆಗೆ ಸಾಕಷ್ಟು ಅವಕಾಶಗಳಿದ್ದು, ಅದನ್ನು ಬಳಸಿಕೊಳ್ಳುತ್ತೇವೆ ಎಂದವರು ಹೇಳಿದ್ದಾರೆ. ಹಾಲಿನ ಉತ್ಪನ್ನಗಳ ಬೆಲೆ ಏರುತ್ತಿರುವ ಬಗ್ಗೆ ಕಳವಳ ಪಡಬೇಕಿಲ್ಲ ಎಂದಿರುವ ಅವರು, ರೈತರಿಗೆ ಉತ್ತಮ ಬೆಲೆ ದೊರೆಯುತ್ತಿದೆ ಎಂದಿದ್ದಾರೆ.

## ಮಧ್ಯಪ್ರದೇಶ : ವಿಮಾನಯಾನದ ಮೂಲಕ ತೀರ್ಥಯಾತ್ರೆಗೆ ಯೋಜನೆ

ಭೂಪಾಲ್, ಏ. 14 - ಹಿರಿಯ ನಾಗರಿಕರಿಗೆ ವಿಮಾನಯಾನದ ಮೂಲಕ ತೀರ್ಥಯಾತ್ರೆಯ ಸೌಲಭ್ಯ ಕಲ್ಪಿಸಲು ಮಧ್ಯಪ್ರದೇಶದ ಶಿವರಾಜ್ ಸಿಂಗ್ ಚೌಹಾಣ್ ಸರ್ಕಾರ ನಿರ್ಧರಿಸಿದೆ. ಚುನಾವಣಾ ವರ್ಷದಲ್ಲೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಜೂನ್ 2012ರಂದು ಮುಖ್ಯಮಂತ್ರಿ ತೀರ್ಥ ದರ್ಶನ ಯೋಜನೆ ಆರಂಭಿಸಲಾಗಿತ್ತು. ಈ ಯೋಜನೆಯ ಅನ್ವಯ ರೈಲುಗಳ ಮೂಲಕ ಯಾತ್ರೆಗೆ ವ್ಯವಸ್ಥೆ ಮಾಡಲಾಗುತ್ತಿತ್ತು. ಬರುವ ಮೇ 21ರಿಂದ ಯಾತ್ರಿಗಳು ವಿಮಾನಯಾನ ಮಾಡಲು ಅವಕಾಶ ನೀಡಲಾಗುವುದು. ಪ್ರಯಾಗ್‌ರಾಜ್, ಶಿರಡಿ, ಮಥುರ ಹಾಗೂ ಗಂಗಾಸಾಗರಗಳಿಗೆ ವಿಮಾನಯಾನದ ಮೂಲಕ ತೀರ್ಥಯಾತ್ರೆ ನಡೆಸಲು ಅವಕಾಶ ಕಲ್ಪಿಸಲಾಗುವುದು.

## 'ಕಸದಿಂದ ರಸ' ಉಚಿತ ಕಾರ್ಯಾಗಾರ

ದಾವಣಗೆರೆ, ಏ. 14- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಇದೇ ದಿನಾಂಕ 22 ರ ಶನಿವಾರ 'ಕಸದರಿಂದ ರಸ', 'ಮನೆ ಅಡುಗೆ', 'ಮನೆ ಮದ್ದು' ಮುಂತಾದ ವಿಚಾರಗಳ ಕುರಿತು ಕಾರ್ಯಾಗಾರ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 98446 91391, 83174 27179.

## ಕಾರದ ಪುಡಿ ಎರಚಿ ದರೋಡೆ: ಮೂವರ ಬಂಧನ

ದಾವಣಗೆರೆ, ಏ.14- ಕಣ್ಣಿಗೆ ಕಾರದ ಪುಡಿ ಎರಚಿ 20 ಲಕ್ಷ ರೂ. ಇದ್ದ ಬ್ಯಾಗ್ ಕಿತ್ತುಕೊಂಡು ಹೋಗಿದ್ದ ತಂಡವನ್ನು ಪೊಲೀಸರು ಬಂಧಿಸಿ, ಅವರಿಂದ 24 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಇದೇ ದಿನಾಂಕ 11ರಂದು ಎನ್.ಹೆಚ್.48 ಸರ್ವೀಸ್ ರಸ್ತೆಯ ಪಿ. ಬಸವನಗೌಡ ಬಡಾವಣೆ ಬ್ರಿಡ್ಜ್ ಬಳಿ ಭದ್ರಾವತಿಯ ದೇವರಾಜ್ ಅಡಿಕೆ ಖೇಣಿ ಪಡೆದುಕೊಂಡು, ರೈತರಿಗೆ ಹಣ ನೀಡಲು 20 ಲಕ್ಷ ರೂ.ಗಳನ್ನು ತನ್ನ ಸ್ನೇಹಿತನಿಂದ ಪಡೆದು ಆಟೋದಲ್ಲಿ ಹೋಗುತ್ತಿದ್ದರು. ಈ ವೇಳೆ ಐವರು ಮಚ್ಚಿನಿಂದ ಆಟೋ ಗ್ಲಾಸ್ ಹೊಡೆದು ಕಣ್ಣಿಗೆ ಕಾರದ ಪುಡಿ ಎರಚಿ ಹಣದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿದ್ದರು ಎಂದು ಆರೋಪಿಸಲಾಗಿತ್ತು.

ಆಂಜನೇಯ ಕಾಟನ್ ಮಿಲ್ ನಿವಾಸಿಗಳಾದ ಸನಾವುಲ್ಲಾ, ಸೈಫುಲ್ಲಾ, ಮತ್ತು ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕನನ್ನು ವಶಕ್ಕೆ ಪಡೆದು, ಅವರಿಂದ ದರೋಡೆ ಮಾಡಿದ್ದ 19 ಲಕ್ಷದ 80 ಸಾವಿರ ನಗದು ಹಣ ಮತ್ತು ಕೃತ್ಯಕ್ಕೆ ಬಳಿಸಿದ ಒಂದು ಪ್ಯಾಸೆಂಜರ್ ಆಟೋ ಮತ್ತು ಒಂದು ಮಹೀಂದ್ರಾ ಸುಪ್ರೋ ಪ್ಯಾಸೆಂಜರ್ ಆಟೋ ವಶಪಡಿಸಿಕೊಂಡಿದ್ದಾರೆ.

ನಗರ ಉಪ ವಿಭಾಗದ ಡಿವೈಎಸ್‌ಪಿ ಮಲ್ಲೇಶ್ ದೊಡ್ಡಮನಿ ಮಾರ್ಗದರ್ಶನದಲ್ಲಿ ತನಿಖಾಧಿಕಾರಿಯಾದ ವಿದ್ಯಾನಗರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀಮತಿ ಪ್ರಭಾವತಿ ಸಿ ಶೇತಸನದಿ, ಪಿ.ಎಸ್.ಐ ಎಂ.ಎಸ್ ದೊಡ್ಡಮನಿ, ಶ್ರೀಮತಿ ರೇಣುಕಾ ಜಿ.ಎಂ, ಸಿಬ್ಬಂದಿಗಳಾದ ಎ.ಎಸ್.ಐ ನಾಗರಾಜ್, ಆನಂದ ಮುಂದಲಮನಿ, ಭೋಜಪ್ಪ ಕಿಚಡಿ, ಯೋಗೀಶ್ ನಾಯ್ಕ, ಮಂಜಪ್ಪ.ಟಿ, ಗೋಪಿನಾಥ ಬಿ.ನಾಯ್ಕ್, ಲಕ್ಷ್ಮಣ, ಆಂಜನೇಯ, ಮಂಜುನಾಥ ಚಾಲಕರಾದ ರಾಮಚಂದ್ರಪ್ಪ ಹಾಗೂ ಜಿಲ್ಲಾ ಪೊಲೀಸ್ ಕಛೇರಿಯ ಸಿಬ್ಬಂದಿಯಾದ ರಾಘವೇಂದ್ರ, ಶಾಂತರಾಜ್ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

# ಪಕ್ಷಾಂತರ: ಬಿಕ್ಕಟ್ಟು ಶಮನಕ್ಕೆ ಪ್ರಧಾನ್, ಸಿಂಗ್ ಪ್ರಯತ್ನ

ಬೆಂಗಳೂರು, ಏ. 14 - ಚುನಾವಣೆ ಹೊಸ್ತಿಲಲ್ಲಿ ಬಿಜೆಪಿಯಿಂದ ಟಿಕೆಟ್ ವಂಚಿತರು ಕಾಂಗ್ರೆಸ್ ಹಾಗೂ ಜೆಡಿಎಸ್‌ನತ್ತ ಸಾಮೂಹಿಕವಾಗಿ ಗುಳೇ ಹೊರಟಿರುವುದು ಕಮಲ ಪಾಳೆಯದಲ್ಲಿ ಆತಂಕ ಸೃಷ್ಟಿಸಿದೆ.

ನರೇಂದ್ರ ಮೋದಿ-ಅಮಿತ್ ಷಾ ಜೋಡಿಯ ಮೋಡಿಯಿಂದ ಮತ್ತೆ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದ್ದ ಬಿಜೆಪಿ ನಾಯಕರಿಗೆ ಟಿಕೆಟ್ ಹಂಚಿಕೆಯ ನಂತರ ಊಹೆಗೂ ಮೀರಿದ ಬಂಡಾಯ, ಲೆಕ್ಕಾಚಾರ ತಲೆಕೆಳಗೆ ಮಾಡಿದೆ.

ಟಿಕೆಟ್ ಹಂಚಿಕೆಯ ನಂತರ ಎದ್ದಿರುವ ಬಂಡಾಯ ಹಾಗು ಗುಳೇ ಹೋಗುವುದನ್ನು ತಪ್ಪಿಸಲು ರಾಜ್ಯ ಚುನಾವಣಾ ಉಸ್ತುವಾರಿ ಹೊಣೆ ಹೊತ್ತ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ರಾಜ್ಯಕ್ಕೆ ಧಾವಿಸಿದ್ದಾರೆ.

ಪ್ರಧಾನ್ ಬೆಳಗಾವಿಗೆ ಧಾವಿಸಿ, ಅಸಂತೃಪ್ತರನ್ನು ಸಮಾಧಾನ ಮಾಡುವ ಪ್ರಯತ್ನ ನಡೆಸಿದ್ದರೆ, ಅರುಣ್‌ಸಿಂಗ್, ಬಿಜೆಪಿಯ ಕೇಂದ್ರ ಕಚೇರಿಯಲ್ಲಿ ಕುಳಿತು ಪಕ್ಷದಿಂದ ಗುಳೇ ಹೋಗುವುದನ್ನು ತಡೆಯಲು ಪ್ರಯತ್ನ ನಡೆಸಿದ್ದಾರೆ.

ಈ ಪ್ರಯತ್ನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮಾರ್ಗದರ್ಶನದಂತೆ ಅತೃಪ್ತ ಶಾಸಕರು ಮತ್ತು ಮುಖಂಡರ ಜೊತೆ ಚರ್ಚೆ ನಡೆಸಿದ್ದಾರೆ.

ಇಷ್ಟರ ನಡುವೆಯೂ ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ, ಮಾಜಿ ಶಾಸಕರಾದ ಚಿಕ್ಕನಗೌಡರ, ನೆಹರು ಓಲೇಕಾರ್, ದೊಡ್ಡಪ್ಪಗೌಡ ನರಿಬೋಳ್, ಗುರು ಪಾಟೀಲ್ ಶಿರವಾಳ , ಮೂಡಿಗೆರೆ ಕುಮಾರಸ್ವಾಮಿ ಅವರು ಕಾಂಗ್ರೆಸ್ ಹಾಗೂ ಜೆಡಿಎಸ್ ಜೊತೆ ಕೈಜೋಡಿಸಿದ್ದಾರೆ.

ಮಾಲೂರಿನ ವಿಜಯಕುಮಾರ್, ಕೆಜಿಎಫ್‌ನ ಮೋಹನ್ ಕೃಷ್ಣ ಸೇರಿ ಹಲವರು ಬಂಡಾಯ ಸಾರಿದ್ದಾರೆ. ಇದು ಬಿಜೆಪಿ ಅಂದಾಜು ತಲೆಕೆಳಗೆ ಮಾಡಿದೆ.

ಇನ್ನು 14 ಪ್ರತಿಷ್ಠಿತ ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿಲ್ಲ. ಈ ಕ್ಷೇತ್ರಗಳಲ್ಲಿ ಬಹುತೇಕ ಹಾಲಿ ಶಾಸಕರೇ ಇದ್ದಾರೆ. ಅದರಲ್ಲಿ ಜಗದೀಶ್ ಶೆಟ್ಟರ್, ಅರವಿಂದ ಲಿಂಬಾವಳಿ, ವಿ. ಸೋಮಣ್ಣ ಸೇರಿದಂತೆ ಪ್ರಮುಖರಿದ್ದಾರೆ.

ಸೋಮಣ್ಣ ಸ್ವಯಂಪ್ರೇರಿತವಾಗಿ ತಾವು ಪ್ರತಿನಿಧಿಸಿರುವ ಗೋವಿಂದರಾಜನಗರ ಕ್ಷೇತ್ರವನ್ನು ತೊರೆದು, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಟಿಕೆಟ್ ಪಡೆದುಕೊಂಡಿದ್ದಾರೆ. ಇದರ ಜೊತೆಗೆ ವರಿಷ್ಠರು ಮೈಸೂರಿನಿಂದ ವರುಣಾ ಕ್ಷೇತ್ರದಿಂದಲೂ ಕಣಕ್ಕಿಳಿಸಿದ್ದಾರೆ.

ಉಳಿದಿರುವ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ ನಂತರ ಬಂಡಾಯ ಮತ್ತಷ್ಟು ಹೆಚ್ಚಬಹುದೆಂಬ ಹಿನ್ನೆಲೆಯಲ್ಲಿ ವರಿಷ್ಠರು ಎಚ್ಚೆತ್ತು, ಪ್ರಧಾನ್ ಅವರನ್ನು ರಾಜ್ಯಕ್ಕೆ ಕಳುಹಿಸಿಕೊಟ್ಟಿದ್ದಾರೆ.

ಕಾಂಗ್ರೆಸ್‌ನಲ್ಲಾದ ಬಂಡಾಯಕ್ಕಿಂತ ಬಿಜೆಪಿಯ ಬಂಡಾಯ ಬಿರುಗಾಳಿಯಂತಿದೆ. ಇದನ್ನು ರಾಜಕೀಯ ಲಾಭವಾಗಿ ಪಡೆದುಕೊಳ್ಳಲು ಕಾಂಗ್ರೆಸ್ ಹಾಗೂ ಜೆಡಿಎಸ್ ಮುಂದಾಗಿವೆ.

ಲಕ್ಷ್ಮಣ್ ಸವದಿ ಹಾಗೂ ಚಿಕ್ಕನಗೌಡ ಇಂದು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದರೆ, ಗುರು ಪಾಟೀಲ್ ಶಿರವಾಳ, ದೊಡ್ಡಪ್ಪಗೌಡ ಪಾಟೀಲ್ ನರಿಬೋಳ, ಚೈತ್ರಾ ಕೋಟೇಕಾರ್, ಹೆಚ್.ಆರ್. ತಮ್ಮಯ್ಯ, ಮೂಡಿಗೇರಿ ಹಾಲಿ ಶಾಸಕ ಕುಮಾರಸ್ವಾಮಿ ಜೆಡಿಎಸ್ ಸೇರ್ಪಡೆಗೊಂಡಿದ್ದಾರೆ.

ಜೆಡಿಎಸ್‌ಗೆ ಎಲ್ಲಿ ಬಲ ಇಲ್ಲವೋ ಅಂತಹ ಕಡೆ ಬಿಜೆಪಿಯ ಹಾಲಿ, ಮಾಜಿ ಶಾಸಕರು ಮತ್ತು ಮುಖಂಡರು ಆ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿರುವುದು ಆ ಕ್ಷೇತ್ರದಲ್ಲಿ ಬಲ ತಂದಂತಾಗಿದೆ.

## ಉ.ವ. 27ನೇ ವಾರ್ಡ್ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಶಾಂತಕುಮಾರ್



ದಾವಣಗೆರೆ,ಏ.14- ದಾವಣಗೆರೆ ಉತ್ತರ ವಲಯ 27ನೇ ವಾರ್ಡ್‌ನ ಯುವ ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನಾಗಿ ಜಿ. ಶಾಂತಕುಮಾರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಉತ್ತರ ವಲಯ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನವೀನ್ ಎಂ. ನಲವಡಿ ತಿಳಿಸಿದ್ದಾರೆ.

## ಎನ್‌ಎಸ್‌ಯುಐ ನ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷರಾಗಿ ತಾಹೀರ್ ಸಮೀರ್



ದಾವಣಗೆರೆ, ಏ.14- ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ, ಕರ್ನಾಟಕ (ಎನ್‌ಎಸ್‌ಯುಐ) ವಿದ್ಯಾರ್ಥಿ ಸಂಘಟನೆ ದಾವಣಗೆರೆ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷರಾಗಿ ತಾಹೀರ್ ಸಮೀರ್ ನೇಮಕಗೊಂಡಿದ್ದಾರೆ.

# ಧರ್ಮಸ್ಥಳ ಯೋಜನೆ ಅಂತರರಾಷ್ಟ್ರೀಯ ಮಟ್ಟಕ್ಕೆ ವಿಸ್ತರಣೆ ಸಾಧ್ಯತೆ

## ಮಲೇಬೆನ್ನೂರು : ಸುಜ್ಞಾನ ನಿಧಿ ಶಿಷ್ಯವೇತನ ವಿತರಣಾ ಕಾರ್ಯಕ್ರಮದಲ್ಲಿ ಯೋಜನಾಧಿಕಾರಿ ವಸಂತ್ ದೇವಾಡಿಗ

ಮಲೇಬೆನ್ನೂರು, ಏ. 14- ಇಲ್ಲಿನ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿಗಳ ಕಛೇರಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸರಳ ಕಾರ್ಯಕ್ರಮದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡುತ್ತಿರುವ 46 ವಿದ್ಯಾರ್ಥಿಗಳಿಗೆ 2022-23ನೇ ಸಾಲಿನ ಸುಜ್ಞಾನ ನಿಧಿ ಶಿಷ್ಯ ವೇತನವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಅವರು, ಡಾ. ವೀರೇಂದ್ರ ಹೆಗ್ಗಡೆ ಅವರ ಆಶಯದಂತೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವ-ಸಹಾಯ ಸಂಘಗಳ ಸದಸ್ಯರ ಮಕ್ಕಳ ಉನ್ನತ ಹಾಗೂ ವೃತ್ತಿಪರ ಶಿಕ್ಷಣಕ್ಕೆ ಸುಜ್ಞಾನ ನಿಧಿ ಕಾರ್ಯಕ್ರಮದಡಿ ಇದುವರೆಗೂ ರಾಜ್ಯದಲ್ಲಿ 60 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸುಮಾರು 70 ಕೋಟಿಯಷ್ಟು ಶಿಷ್ಯವೇತನ ನೀಡಲಾಗಿದೆ.




ಮಲೇಬೆನ್ನೂರು ಯೋಜನಾಧಿಕಾರಿಗಳ ಕಛೇರಿ ವ್ಯಾಪ್ತಿಯಲ್ಲಿ ಕಳೆದ ವರ್ಷ 124 ವಿದ್ಯಾರ್ಥಿಗಳಿಗೆ 5.58 ಲಕ್ಷ ರೂ., ಈ ವರ್ಷದಲ್ಲಿ ಈಗ 46 ವಿದ್ಯಾರ್ಥಿಗಳಿಗೆ ಸುಮಾರು 10 ಲಕ್ಷ ರೂ. ಶಿಷ್ಯವೇತನ ಬಂದಿದ್ದು, ಇನ್ನೂ 25-30 ವಿದ್ಯಾರ್ಥಿಗಳಿಗೆ ಮಂಜೂರಾಗಿ ಬರಲಿದೆ ಎಂದು ಅವರು ತಿಳಿಸಿದರು.

**ವಿದ್ಯಾರ್ಥಿಗಳು ಓದಿ ಉನ್ನತ ಸ್ಥಾನಕ್ಕೆ ಹೋದ ನಂತರ ತಂದೆ-ತಾಯಿಗಳನ್ನು ವೃದ್ಧಾಶ್ರಮ ಗಳಿಗೆ ಕಳುಹಿಸುವಂತಾಗಬಾರದು.**
**ಜಿಗಳಿ ಪ್ರಕಾಶ್, 'ಜನತಾವಾಣಿ' ಹಿರಿಯ ವರದಿಗಾರ**

ಕಾರ್ಯಕ್ರಮವನ್ನು ದೀಪ ಬೆಳಗಿಸಿ, ಉದ್ಘಾಟಿಸಿದ ಮಕ್ಕಳ ತಜ್ಞ ಡಾ. ಶ್ರೀನಿವಾಸ್ ಮಾತನಾಡಿ, ನಾವು ಓದುವಾಗ ಈ ರೀತಿಯ ಸಹಕಾರ ಸಿಗಲಿಲ್ಲ. ಈಗ ಸರ್ಕಾರದ ಜೊತೆಗೆ ಧರ್ಮಸ್ಥಳ ಯೋಜನೆಯು ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ನೆರವು ನೀಡುತ್ತಿರುವುದು ಈಗಿನ ವಿದ್ಯಾರ್ಥಿಗಳ ಪುಣ್ಯ ಎಂದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಹಾಗೂ ಸರ್ಕಾರಿ ಉರ್ದು ಪ್ರೌಢ ಶಾಲೆ ಶಿಕ್ಷಕ ರೇವಣಸಿದ್ದಪ್ಪ ಅಂಗಡಿ ಮಾತನಾಡಿ, ವಿದ್ಯಾರ್ಥಿಗಳು ಪೋಷಕರ ಹಾಗೂ ಗುರುಗಳ ಒತ್ತಾಯಕ್ಕೆ ಓದದೇ ಇಷ್ಟ ಪಟ್ಟು ಓದಬೇಕೆಂದು ಹೇಳಿದರು.

ಇಲ್ಲಿನ ಪೊಲೀಸ್ ಠಾಣೆಯ ಎಎಸ್‌ಐ ಪಾಲಾಕ್ಷಪ್ಪ ಮಾತನಾಡಿ, ವೀರೇಂದ್ರ ಹೆಗ್ಗಡೆ ಅವರ ಸಾಮಾಜಿಕ ಕಳಕಳಿ ಮಾದರಿ ಎಂದರು.

ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಮೇಲ್ವಿಚಾರಕರಾದ ಶ್ರೀಮತಿ ಸಂಪತ್ ಲಕ್ಷ್ಮಿ, ಜಿಗಳಿ ವಲಯದ ಮೇಲ್ವಿಚಾರಕಿ ಶ್ರೀಮತಿ ಪದ್ಮಾವತಿ, ಕಛೇರಿಯ ವ್ಯವಸ್ಥಾಪಕಿ ಆಶಾ, ಅನುಷಾ, ರಾಜೇಶ್, ರೇಷ್ಮಾ ಶಿಲ್ಪಾ, ಮಂಜು ಈ ವೇಳೆ ಹಾಜರಿದ್ದರು.

# ಬಿಜೆಪಿ ಆಡಳಿತಕ್ಕೆ ಬಂದ ದಿನದಿಂದಲೂ ಅಂಬೇಡ್ಕರ್ ರಚಿಸಿದ ಸಂವಿಧಾನ ಬದಲಿಸುವ ಹುನ್ನಾರ

## ಜಿಲ್ಲಾ ಕಾಂಗ್ರೆಸ್ ಸಮಿತಿಯ ಇಂಟೆಕ್ ಕಾರ್ಯಕ್ರಮದಲ್ಲಿ ಕೆಪಿಸಿಸಿ ರಾಜ್ಯ ವಕ್ತಾರ ಡಿ. ಬಸವರಾಜ್



ದಾವಣಗೆರೆ, ಏ.14- ಓಟಿಗಾಗಿ ಸಂವಿಧಾನಕ್ಕೆ ಅಪಚಾರ ಎಸಗಲು ಬೊಮ್ಮಾಯಿ ಸರ್ಕಾರ ಒಳಮೀಸಲಾತಿ ನೀಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ಅವೈಜ್ಞಾನಿಕವೆಂದು ಸುಪ್ರೀಂ ಕೋರ್ಟ್ ರಾಜ್ಯ ಬಿಜೆಪಿ ಸರ್ಕಾರಕ್ಕೆ ಕಪಾಳ ಮೋಕ್ಷ ಮಾಡಿದೆ ಎಂದು ಕೆಪಿಸಿಸಿ ರಾಜ್ಯ ವಕ್ತಾರ ಡಿ. ಬಸವರಾಜ್ ಹೇಳಿದರು.

ನಗರದ ಹದಡಿ ರಸ್ತೆಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್‌ನಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಇಂಟೆಕ್ ವಿಭಾಗ ಏರ್ಪಡಿಸಿದ್ದ ಡಾ. ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಆಡಳಿತಕ್ಕೆ ಬಂದ ದಿನದಿಂದಲೂ ಡಾ.ಬಿ.ಆರ್. ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಬದಲಿಸಲು ಹುನ್ನಾರ ನಡೆಸುತ್ತಾ ಬಂದಿದೆ. ಒಂದೊಮ್ಮೆ ಬಿಜೆಪಿ ಸಂವಿಧಾನ ಬದಲಿಸಿದರೆ ದೇಶದಲ್ಲಿ ರಕ್ತಕ್ರಾಂತಿ ಆಗಲಿದೆ ಎಂದು ಅವರು ಎಚ್ಚರಿಕೆ ನೀಡಿದರು.

ವೋಟಿಗಾಗಿ ಸಂವಿಧಾನಕ್ಕೆ ಅಪಚಾರ ಎಸಗಲು ಬೊಮ್ಮಾಯಿ ಸರ್ಕಾರ ಒಳಮೀಸಲಾತಿ ನೀಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ಅವೈಜ್ಞಾನಿಕವೆಂದು ಸುಪ್ರೀಂ ಕೋರ್ಟ್ ರಾಜ್ಯ ಬಿಜೆಪಿ ಸರ್ಕಾರಕ್ಕೆ ಕಪಾಳ ಮೋಕ್ಷ ಮಾಡಿದೆ ಎಂದು ಬಸವರಾಜ್ ತಿಳಿಸಿದರು.

ಮುಸ್ಲಿಮರಿಗೆ ನೀಡಲಾಗುತ್ತಿದ್ದ ಶೇ. 4ರ ಮೀಸಲಾತಿಯನ್ನು ರದ್ದು ಪಡಿಸಲು ತೆಗೆದುಕೊಂಡಿರುವ ನಿರ್ಧಾರವು ಸಂಪೂರ್ಣ ತಪ್ಪು ಕಲ್ಪನೆಯನ್ನು ಆಧರಿಸಿದೆ ಎನ್ನುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿರುವುದು ಐತಿಹಾಸಿಕವಾಗಿದೆ.

ಇದೇ ರೀತಿ ಪರಿಶಿಷ್ಟ ಜಾತಿ ವರ್ಗಗಳಿಗೆ ಒಳಮೀಸಲಾತಿ ನೀಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ಸಂವಿಧಾನ ವಿರೋಧಿಯಾಗಿದೆ. ಇದರ ಬಗ್ಗೆಯೂ ಮುಂದಿನ ದಿನಗಳಲ್ಲಿ ಭೋವಿ, ಬಂಜಾರ, ಕೊರಮ, ಕೊರಚ ಜಾತಿಯ ಸಮುದಾಯಗಳಿಂದ ಸುಪ್ರೀಂ ಕೋರ್ಟಿಗೆ ರಾಜ್ಯ ಸರ್ಕಾರದ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಡಿ. ಬಸವರಾಜ್ ತಿಳಿಸಿದರು.

ಸಮಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಇಂಟೆಕ್ ವಿಭಾಗದ ಅಧ್ಯಕ್ಷ ಕೆ.ಎಂ. ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ಬಿ.ಎನ್. ವಿನಾಯಕ, ಮಹ್ಮದ್ ಜಿಕ್ರಿಯಾ, ಆಲೂರ್ ಸಿದ್ದೇಶ್, ಬಸವಾಪಟ್ಟಣ ಖಲೀಲ್ ಸಾಬ್, ಕೆ.ಜಿ. ರಹಮತ್‌ವುಲ್ಲಾ, ಚಿನ್ನಸಮುದ್ರ ಶೇಖರ್ ನಾಯ್ಕ್, ಭಾಸಿತ್‌ಖಾನ್, ಹುಲಿಕಟ್ಟೆ ಚಂದ್ರಪ್ಪ, ಇಟ್ಟಿಗುಡಿ ಮಂಜುನಾಥ್, ಆರ್. ಸೂರ್ಯಪ್ರಕಾಶ್, ಎನ್.ಎಸ್. ವೀರಭದ್ರಪ್ಪ, ಬಿ.ಹೆಚ್. ಉದಯಕುಮಾರ್, ಡಿ. ಶಿವಕುಮಾರ್, ಮುಬಾರಕ್, ಕೆ. ವಸಂತ್‌ನಾಯ್ಕ್, ಬಸವರಾಜ್, ಹೊನ್ನೂರು-ಗೊಲ್ಲರಹಟ್ಟಿ ಲಿಂಗರಾಜ್, ಖಲೀಲ್ ಅಹ್ಮದ್, ಗಣೇಶ್, ವಸಂತ್, ಗಂಗಾಧರ್, ಪರಮೇಶ್ ಸೇರಿದಂತೆ ಇತರರು ಹಾಜರಿದ್ದರು.

# ಮತ ಹಾಕುವ ವೇಳೆ ಮಾತ್ರ ಸ್ಲಂ ಜನರ ನೆನಪಿಸಿಕೊಳ್ಳುವ ರಾಜಕಾರಣಿಗಳು



## ಸ್ಲಂ ಜನಾಂದೋಲನದ ಕಾರ್ಯಕ್ರಮದಲ್ಲಿ ಹಿರಿಯ ವಕೀಲ ಬಿ.ಎಂ. ಹನುಮಂತಪ್ಪ ಖೇದ

ದಾವಣಗೆರೆ, ಏ.14- ಕೊಳಚೆಯಲ್ಲಿ ಹುಟ್ಟಿ, ಅಲ್ಲೇ ಬೆಳೆದು ಅಲ್ಲಿಯೇ ಸಾಯುವ ನಾವುಗಳು ಚುನಾವಣೆ ವೇಳೆ ತಲೆ ತಗ್ಗಿಸಿ ಮತದಾನ ಮಾಡುವ ಜತೆಗೆ ನಮಗೆ ದೊರೆಯಬೇಕಾದ ಹಕ್ಕುಗಳನ್ನು ತಲೆ ಎತ್ತಿ ಕೇಳುವ ನಾಯಕತ್ವದ ಗುಣ ಬೆಳೆಸಿಕೊಳ್ಳಬೇಕು ಎಂದು ಹಿರಿಯ ವಕೀಲ ಬಿ.ಎಂ.ಹನುಮಂತಪ್ಪ ಹೇಳಿದರು.

ಶುಕ್ರವಾರ ನಗರದ ರೋಟರಿ ಬಾಲಭವನದಲ್ಲಿ ಸ್ಲಂ ಜನಾಂದೋಲನ ಕರ್ನಾಟಕ ಹಾಗೂ ಸಾವಿತ್ರಿಬಾಯಿ ಫುಲೆ ಮಹಿಳಾ ಸಂಘಟನೆ ಹಮ್ಮಿಕೊಂಡಿದ್ದ ಡಾ.ಬಿ. ಆರ್.ಅಂಬೇಡ್ಕರ್ ಜಯಂತಿ ಹಾಗೂ ಸ್ಲಂ ಜನರ ಪ್ರಣಾಳಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮತ ಹಾಕುವ ವೇಳೆ ಮಾತ್ರ ರಾಜಕೀಯ ಪಕ್ಷಗಳಿಗೆ ಸ್ಲಂ ಜನ, ದಲಿತ, ಬಡವರು ನೆನಪಾಗುತ್ತಾರೆ. ಆದರೆ, ಸೌಲಭ್ಯ ನೀಡುವಾಗ ಮಾತ್ರ ಅವರು ನೆನಪಾಗುವುದಿಲ್ಲ. ಇದಲ್ಲದೇ ಆಡಳಿತಾರೂಢ ಪಕ್ಷಗಳು ಶ್ರೀಮಂತರ ಓಲೈಕೆಗೆ ನಿಂತಿದ್ದು, ಈಗಿರುವ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿ ಮಾಡಲು ಪಣ ತೊಟ್ಟಂತಿದೆ ಎಂದು ಕಿಡಿ ಕಾರಿದರು.

ಬಡವರ ಕೂಗು, ಗೋಳುಗಳು ಎಂದಿಗೂ ಸರ್ಕಾರಕ್ಕೆ ಕೇಳುವುದಿಲ್ಲ. ಬದಲಾಗಿ ಬೆರಳೆಣಿಕೆಯಷ್ಟು ಶ್ರೀಮಂತರ ಮಾತು ಕೇಳುತ್ತದೆ. ಹೀಗಾಗಿ ನಮ್ಮ ಧ್ವನಿ ಸರ್ಕಾರಕ್ಕೆ ಕೇಳಬೇಕೆಂದರೆ ನಮ್ಮಲ್ಲೇ ನೂರಾರು, ಸಾವಿರಾರು ನಾಯಕರು ಹುಟ್ಟಬೇಕು. ಹೋರಾಟದ ಮೂಲಕ ನಮ್ಮ ಹಕ್ಕುಗಳನ್ನು ಪಡೆಯುವ ಛಲ ಬರಬೇಕು ಎಂದರು.

ಪ್ರಸ್ತುತ ದಿನಮಾನಗಳಲ್ಲಿ ಬಹುತೇಕ ಸಂಘಟನೆಗಳ ರಾಜಕೀಯ ಪ್ರೇರಿತವಾಗಿ ಕೆಲಸ ಮಾಡುತ್ತಿವೆ. ಜನರ ನೋವಿಗೆ ಧ್ವನಿಯಾಗುವ ಒಂದೇ ಒಂದು ಸಂಘಟನೆ ಕೂಡ ಸಿಗುವುದಿಲ್ಲ. ಈ ರೀತಿ ರಾಜಕೀಯ ಪಕ್ಷದ ತೆಕ್ಕೆಗೆ ಸೇರುವ ಸಂಘಟನೆಗಳು ಬಹುಬೇಗ ಅಂತ್ಯ ಕಾಣುತ್ತವೆ. ಜನಪರವಾಗಿ ಕೆಲಸ ಮಾಡುವ ಜನರಿಗೆ ಧ್ವನಿಯಾಗುವ ಸಂಘಟನೆಗಳು ಇಂದು ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸ್ಲಂ ಜನಾಂದೋಲನ ಕರ್ನಾಟಕ ಸಂಘಟನೆಯು ಸ್ಲಂ ನಿವಾಸಿಗಳ ಪರವಾಗಿ ಕೆಲಸ ಮಾಡುತ್ತಿದ್ದು, ರಾಜಕೀಯ ಮುಕ್ತವಾಗಿದೆ. ಯಾವುದೇ ಸಮಸ್ಯೆಗಳ ವಿರುದ್ಧ ಧೈರ್ಯವಾಗಿ ಹೋರಾಟ ಮಾಡಬಹುದು. ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸೇರಿದರೆ ಜನರ ಪರವಾಗಿ ಕೆಲಸ ಮಾಡಲು ಆಗಲ್ಲ ಎಂದರು.

ಹಿರಿಯ ವಕೀಲ ಎಲ್.ಹೆಚ್. ಅರುಣಕುಮಾರ್ ಮಾತನಾಡಿ, ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಸಹ ಇಂದಿಗೂ ನಾವು ಜಾತಿ, ಧರ್ಮದ ಆಧಾರದ ಮೇಲೆ ನೋಡುವ ವ್ಯವಸ್ಥೆ ಇದೆ. ನಾವುಗಳು ಇನ್ನೊಬ್ಬರ ಜೊತೆ ಬೆರೆಯಲು ಪ್ರಯಾಸ ಪಡುವಂತಾಗಿದೆ. ಇಂದಿಗೂ ಸಹ ಅಸ್ಪೃಶ್ಯತೆ, ಅಸಮಾನತೆ ಇದೆ. ಈ ನಡುವೆ ಸಂವಿಧಾನದ ಮೂಲ ಆಧಾರ ಸ್ತಂಭಗಳನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ. ಬಲಿಷ್ಠ ಸಂವಿಧಾನ ಇರುವುದರಿಂದಲೇ ದೇಶದಲ್ಲಿ ಪ್ರಜಾಪ್ರಭುತ್ವ ನಿರಂತರವಾಗಿ ಇದೆ ಎಂದರು.

ಕಾರ್ಯಕ್ರಮದಲ್ಲಿ ಸ್ಲಂ ಜನಾಂದೋಲನ ಕರ್ನಾಟಕ ದಾವಣಗೆರೆ ಸಮಿತಿಯ ಪ್ರಧಾನ ಕಾರ್ಯದರ್ಶಿ ಜಿ. ಹೆಚ್.ರೇಣುಕಾ ಯಲ್ಲಮ್ಮ, ಗೌರವಾಧ್ಯಕ್ಷ ಎಂ.ಶಬ್ಬೀರ್ ಸಾಬ್, ಮಂಜುಳಾ, ಬಾಲಪ್ಪ ಹಾಗು ಇತರರು ಇದ್ದರು.

# ಹರಪನಹಳ್ಳಿಯಲ್ಲಿ ಅಂಬೇಡ್ಕರ್ ಜಯಂತಿ ಸರಳ ಆಚರಣೆ



ಹರಪನಹಳ್ಳಿ,ಏ.14- ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ. ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಹೂವಿನ ಹಾರ ಹಾಕಿ ಪೂಜೆ ಸಲ್ಲಿಸಲಾಯಿತು.

ಶಾಸಕ ಜಿ.ಕರುಣಾಕರ ರೆಡ್ಡಿ ತಮ್ಮ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಿದರು.

ತಾಲ್ಲೂಕು ಆಡಳಿತದ ವತಿಯಿಂದ ಪಟ್ಟಣದ ಮಿನಿ ವಿಧಾನಸೌಧದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಈ ವೇಳೆ ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್, ತಹಶೀಲ್ದಾರ್ ಶಿವಕುಮಾರ ಬಿರಾದಾರ,ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ರೇಣುಕಾದೇವಿ, ವಾರ್ಡನ್ ಎನ್.ಜಿ. ಬಸವರಾಜ, ರಘು, ಸುನೀತ, ಅಧೀಕ್ಷಕರಾದ ಯಾಸ್ಮಿನ್ ಇದ್ದರು.

ಪಟ್ಟಣದ 9ನೇ ವಾರ್ಡ್ ಛಲವಾದಿ ಕೇರಿಯಲ್ಲಿ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಈ ವೇಳೆ ಜಿಲ್ಲಾ ಛಲವಾದಿ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಚಲವಾದಿ ಪರುಶುರಾಮ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಪ್ರತಾಪ್ ಛಲವಾದಿ ಮುಖಂಡರಾದ ಗುಂಡಗತ್ತಿ ಕೋಟ್ರಪ್ಪ, ಸಿ. ಬಸವರಾಜ, ಉಪನ್ಯಾಸಕರಾದ ಬೆಣ್ಣಿಹಳ್ಳಿ ಅಜ್ಜಪ್ಪ, ಸಿ.ಮುರುಳಿ ಇದ್ದರು.

ಪಟ್ಟಣದ ಬಾಬು ಜಗಜೀವನ್ ರಾಮ್ ಭವನದಲ್ಲಿ ತಾಲ್ಲೂಕು ಅಂಬೇಡ್ಕರ್ ಸಮಿತಿ ಹಾಗೂ ಮಾದಿಗ ಸಮಾಜದ ವತಿಯಿಂದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ ಬಾಬು ಜಗಜೀವನ್ ರಾಮ್ ಜಯಂತಿ ಆಚರಿಸಲಾಯಿತು.

ಈ ವೇಳೆ ಮಾದಿಗ ಸಮಾಜದ ಅಧ್ಯಕ್ಷ ಯರಬಾಳು ಹನುಮಂತಪ್ಪ, ಅಂಬೇಡ್ಕರ್ ಸಂಘದ ಅಧ್ಯಕ್ಷ ನಿಚ್ಚವನಹಳ್ಳಿ ಭೀಮಪ್ಪ, ಕಾರ್ಯದರ್ಶಿ ಓ ಮಹಾಂತೇಶ, ಮುಖಂಡರಾದ ಓ. ರಾಮಪ್ಪ, ಗೌರಿಹಳ್ಳಿ ಮಂಜುನಾಥ, ಹುಣಿಸೆಹಳ್ಳಿ ಕೊಟ್ರಪ್ಪ, ಪುಣಬಗಟ್ಟೆ ನಿಂಗಪ್ಪ, ಕಬ್ಬಳ್ಳಿ ಪರಸಪ್ಪ, ಕಬ್ಬಳ್ಳಿ ಬಸವರಾಜ, ಬೂದಿಹಾಳ್ ಮೂಗಣ್ಣ, ಗುಡಿಹಳ್ಳಿ ಶೇಖರಪ್ಪ, ಯರಬಳ್ಳಿ ಅಂಜಿನಪ್ಪ, ಮಾದಿಹಳ್ಳಿ ಮಂಜುನಾಥ, ಬಿ.ಸಿ.ಎಂ. ನಿಲಯ ಮೇಲ್ವಿಚಾರಕ ಜುಂಜಪ್ಪ ಸೇರಿದಂತೆ ಇತರರು ಇದ್ದರು,

# ನೀತಿ ಸಂಹಿತೆ ಉಲ್ಲಂಘನೆ : 1.67 ಕೋಟಿ ನಗದು, ಇತರೆ ವಸ್ತುಗಳ ವಶ

ದಾವಣಗೆರೆ, ಏ. 14- ಜಿಲ್ಲೆಯಾದ್ಯಂತ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ಕೈಗೊಳ್ಳಲಾಗುತ್ತಿದ್ದು, ನಗರದ ಪಿ.ಜೆ. ಬಡಾವಣೆಯಲ್ಲಿ ಯಾವುದೇ ಅನುಮತಿ ಪಡೆಯದೇ ಟೆಲಿ ಪ್ರಚಾರ ನಡೆಸಲು ಉದ್ದೇಶಿಸಲಾಗಿದೆ ಎಂಬ ಮಾಹಿತಿ ಆಧರಿಸಿ ರೂ.6 ಲಕ್ಷ ಮೌಲ್ಯದ 59 ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಳ್ಳಲಾಗುತ್ತಿದೆ. ಇದಲ್ಲದೇ 48 ಸಾವಿರ ರೂ. ಮೌಲ್ಯದ 128.01 ಲೀಟರ್ ಮದ್ಯ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದರು.

ಇದುವರೆಗೆ 50.1 ಲಕ್ಷ ರೂ. ನಗದು, 62.4 ಲಕ್ಷ ರೂ. ಮೌಲ್ಯದ 6273.195 ಲೀ ಮದ್ಯ, ಅಂದಾಜು 48.2 ಲಕ್ಷ ಮೌಲ್ಯದ 3.209 ಕೆ.ಜಿ ಮಾದಕ ವಸ್ತು, 48.2 ಲಕ್ಷ ರೂ. ಮೌಲ್ಯದ ಇತರೆ ವಸ್ತುಗಳು ಸೇರಿದಂತೆ ಒಟ್ಟು 1.67 ಕೋಟಿಯಷ್ಟು ನಗದು ಮತ್ತು ಇತರೆ ವಸ್ತುಗಳನ್ನು ನೀತಿ ಸಂಹಿತೆ ಆರಂಭವಾದಾಗಿನಿಂದ ಇಲ್ಲಿಯವರೆಗೆ ವಶಪಡಿಸಿಕೊಳ್ಳಲಾಗಿದೆ.

ನಿನ್ನೆ ವಶಪಡಿಸಿಕೊಂಡ ಮದ್ಯದಲ್ಲಿ 43.19 ಲೀ ಪೊಲೀಸ್ ಇಲಾಖೆ ಮತ್ತು 84.82 ಲೀ ಅಬಕಾರಿ ಇಲಾಖೆಯಿಂದ ಕಾರ್ಯಾಚರಣೆ ಮಾಡಿ ವಶಪಡಿಸಿಕೊಳ್ಳಲಾಗಿದೆ.

# ಮಾಯಕೊಂಡದ ಬಿಜೆಪಿ ಅಭ್ಯರ್ಥಿ ಬಸವರಾಜ್ ನಾಯ್ಕ ಪ್ರಚಾರ ಆರಂಭ



ದಾವಣಗೆರೆ, ಏ.14- ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ. ಬಸವರಾಜ ನಾಯ್ಕ ಅವರು ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್, ಮಾಯಕೊಂಡ ಹಾಲಿ ಶಾಸಕ ಪ್ರೊ. ಲಿಂಗಣ್ಣ ಅವರೊಂದಿಗೆ ಕುರುಡಿ ಗ್ರಾಮದ ಸಿದ್ದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ವಿಶೇಷ ಪೂಜೆ ಸಲ್ಲಿಸುವ ಮೂಲಕ ಅಧಿಕೃತವಾಗಿ ಚುನಾವಣಾ ಪ್ರಚಾರ ಆರಂಭಿಸಿದರು.

ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಬಸವರಾಜ ನಾಯ್ಕ, ಬಿಜೆಪಿಯ ಅಧಿಕೃತ ಅಭ್ಯರ್ಥಿಯಾಗಿ ಪ್ರಚಾರ ಆರಂಭಿಸಿದ್ದೇನೆ. ಮಾಯಕೊಂಡ ಬಿಜೆಪಿಯ ಭದ್ರಕೋಟೆ. ಇಲ್ಲಿಂದ ಗೆದ್ದು ಪ್ರಧಾನಿ ಮೋದಿ, ಸಿಎಂ ಬೊಮ್ಮಾಯಿ ಕೈ ಬಲಪಡಿಸುವ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಮಾಯಕೊಂಡದಲ್ಲಿ ಬಂಡಾಯವೆದ್ದಿರುವ ಪ್ರಶ್ನೆಗೆ ಉತ್ತರಿಸಿ, ಬಿಜೆಪಿಯಲ್ಲಿ ಬಂಡಾಯ ಅನ್ನುವ ಪ್ರಶ್ನೆಯಿಲ್ಲ. ಪಕ್ಷದಿಂದ ಯಾರೂ ಸಿಡಿದು ನಿಲ್ಲುವುದಿಲ್ಲ. ಬಂಡಾಯ ಅಭ್ಯರ್ಥಿಗಳ ಜೊತೆ ತಾಲ್ಲೂಕು ಅಧ್ಯಕ್ಷರು ಮಾತನಾಡಿದ್ದಾರೆ. ಎರಡು ದಿನಗಳಲ್ಲಿ ಎಲ್ಲವೂ ಸರಿಯಾಗುತ್ತೆ. ಹಾಲಿ ಶಾಸಕ ಪ್ರೊ. ಲಿಂಗಣ್ಣ ನಮ್ಮ ಜೊತೆ ಇದ್ದಾರೆ. ಮಾಯಕೊಂಡದಲ್ಲಿ ಪಕ್ಷ ಕಟ್ಟಿ ಬೆಳೆಸಿದ ರವೀಂದ್ರನಾಥ್ ಪೂಜೆಗೆ ಬಂದಿದ್ದಾರೆ. ಇಂದು ಅಥವಾ ನಾಳೆ ಎಲ್ಲವೂ ಸರಿಯಾಗುತ್ತೆ. ಅವರು ನಮ್ಮ ಜೊತೆ ಪ್ರಚಾರಕ್ಕೆ ಬರುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

# ವಡ್ನಾಳ್ ರಾಜಣ್ಣ ಮಾರ್ಗದರ್ಶನದಲ್ಲಿ ಚುನಾವಣೆ

## ಚನ್ನಗಿರಿ ಕಾಂಗ್ರೆಸ್ ಅಭ್ಯರ್ಥಿ ಶಿವಗಂಗಾ ಬಸವರಾಜ್



ಚನ್ನಗಿರಿ, ಏ.14- ಕ್ಷೇತ್ರದಲ್ಲಿ ಕಳೆದ 5 ವರ್ಷದಿಂದ ಕಾಂಗ್ರೆಸ್ ಪಕ್ಷ ಸಂಘಟಿಸುವುದು ಗಮನಿಸಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಶಾಮನೂರು ಮಲ್ಲಿಕಾರ್ಜುನ್ ಆಶೀರ್ವಾದದಿಂದ ಕ್ಷೇತ್ರದಲ್ಲಿ ಟಿಕೆಟ್ ದೊರೆತಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ಬಸವರಾಜ ವಿ.ಶಿವಗಂಗಾ ತಿಳಿಸಿದ್ದಾರೆ.

ಪಟ್ಟಣದ ತಮ್ಮ ನಿವಾಸದಲ್ಲಿ ಮೊನ್ನೆ ನಡೆದ ಕಾರ್ಯಕರ್ತರ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಮಾಜಿ ಶಾಸಕ ವಡ್ನಾಳ್ ರಾಜಣ್ಣ ಮಾರ್ಗದರ್ಶನದಲ್ಲೇ ಚುನಾವಣೆ ನಡೆಸಲಾಗುವುದು ಎಂದು ಹೇಳಿದರು.

ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಬಯಿಸಿ, 8 ಮಂದಿ ಆಕಾಂಕ್ಷಿತರು ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದರು. ಈ ಎಂಟು ಜನರಲ್ಲಿ ಪಕ್ಷ ನನ್ನನ್ನು ಗುರುತಿಸಿ, ಅಭ್ಯರ್ಥಿಯಾಗಿ ಘೋಷಿಸಿದ್ದು, ಸಹಜವಾಗಿಯೇ ಇನ್ನುಳಿದವರಿಗೆ ಬೇಸರ ತಂದಿದೆ. ಇನ್ನುಳಿದ 7 ಮಂದಿ ನನ್ನ ಸಹೋದರರೊಂದಿಗೆ ಚರ್ಚೆ ನಡೆಸಿದ್ದು, ಎಲ್ಲರ ಸಹಕಾರದಿಂದ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದರು.

ವಿರೋಧ ಪಕ್ಷಕ್ಕಿಂತ ನಾವು ಯಾವುದರಲ್ಲೂ ಕಡಿಮೆ ಇಲ್ಲ. ಪಕ್ಷದ ಕಾರ್ಯಕರ್ತರು ಯಾವುದಕ್ಕೂ ಹೆದರದೇ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡು ಕ್ಷೇತ್ರದ ಅಭಿವೃದ್ಧಿ ಬಗ್ಗೆ ನನ್ನದೇ ಆಲೋಚನೆಗಳಿದ್ದು, ನಿಮ್ಮೆಲ್ಲರ ಸಹಕಾರದಿಂದ ಚನ್ನಗಿರಿ ಕ್ಷೇತ್ರ ಮತ್ತಷ್ಟು ಅಭಿವೃದ್ಧಿಪಡಿಸೋಣ ಎಂದರು.

ಪುರಸಭೆ ಸದಸ್ಯರಾದ ಜಿ.ನಿಂಗಪ್ಪ, ಸೈಯದ್ ಗೌಸ್‌ಪೀರ್, ಮಂಜುನಾಥ್ ಸೇರಿದಂತೆ ಕಾರ್ಯಕರ್ತರು, ಅಭಿಮಾನಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.


# ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಇಂದು ಚಿತ್ರಕಲಾ ಪ್ರಾತ್ಯಕ್ಷಿಕೆ

ದೃಶ್ಯಕಲಾ ಮಹಾವಿದ್ಯಾಲಯದ ವತಿಯಿಂದ ಇಂದು ವಿಶ್ವಕಲಾ ದಿನಾಚರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಬೆಳಿಗ್ಗೆ 11 ಗಂಟೆಗೆ ಚಿತ್ರಕಲಾವಿದ ಬಿ. ಅಚ್ಯುತಾನಂದ ಅವರಿಂದ ಚಿತ್ರಕಲಾ ಪ್ರಾತ್ಯಕ್ಷಿಕೆ ನಡೆಯಲಿದೆ.

ದಾವಣಗೆರೆ ವಿವಿ ಕುಲಸಚಿವ (ಮೌಲ್ಯಮಾಪನ) ಡಾ. ಕೆ. ಶಿವಶಂಕರ್ ಕಾರ್ಯಕ್ರಮ ಉದ್ಘಾಟಿಸುವರು. ಅತಿಥಿಗಳಾಗಿ ದಾವಣಗೆರೆ ವಿವಿ ಕಲಾ ನಿಕಾಯದ ಡೀನ್ ಡಾ. ವೆಂಕಟರಾವ್ ಪಲಾಟೆ ಉಪಸ್ಥಿತರಿರಲಿದ್ದಾರೆ.

ದೃಶ್ಯಕಲಾ ಮಹಾವಿದ್ಯಾಲಯದ ಸಂಯೋಜನಾಧಿಕಾರಿ ಡಾ. ಸತೀಶ್ ಕುಮಾರ್ ಪಿ. ವಲ್ಲೇಪುರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಫ್ಯಾಷನ್ ಡಿಸೈನ್ ಅಧ್ಯಯನ ವಿಭಾಗದ ಡಾ. ಜೈರಾಜ್ ಎಂ. ಚಿಕ್ಕಪಾಟೀಲ, ಬೋಧನಾ ಸಹಾಯಕ ಡಾ. ಸಂತೋಷ ಕುಮಾರ್ ಕುಲಕರ್ಣಿ ಉಪಸ್ಥಿತರಿರುವರು.

# ಗೃಹರಕ್ಷಕ ದಳದಲ್ಲಿ ಅಂಬೇಡ್ಕರ್ ಜಯಂತಿ



ದಾವಣಗೆರೆ, ಏ. 14 - ಜಿಲ್ಲಾ ಗೃಹರಕ್ಷಕ ದಳದ ಕಛೇರಿಯಲ್ಲಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ 132ನೇ ಜಯಂತಿಯನ್ನು ಆಚರಿಸಲಾಯಿತು. ನೂತನ ಕಮಾಂಡರ್ ಡಾ. ಸುಜಿತ್‌ಕುಮಾರ್, ಸ್ಟಾಫ್ ಆಫೀಸರ್ ಸರಸ್ವತಿ, ಬೋಧಕರಾದ ಲೋಕೇಶ್ ಹಾಗೂ ಘಟಕಾಧಿಕಾರಿಗಳು, ಕಛೇರಿಯ ಸಿಬ್ಬಂದಿಗಳು ಹಾಜರಿದ್ದರು.

# ಜಗಳೂರು : ಲೋಕಶಕ್ತಿಯಿಂದ ಅಜ್ಜಯ್ಯ ಮದಕರಿ ಸ್ಪರ್ಧೆ

ದಾವಣಗೆರೆ, ಏ. 14- ಜಗಳೂರು ವಿಧಾನಸಭಾ ಕ್ಷೇತ್ರದಿಂದ ಲೋಕಶಕ್ತಿ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಪಿ.ಅಜ್ಜಯ್ಯ ಮದಕರಿ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯೋಗ, ಶಿಕ್ಷಣ, ಆರೋಗ್ಯ ಸೇರಿದಂತೆ ಮೂಲ ಸೌಲಭ್ಯಗಳನ್ನು ಒದಗಿಸುವ ಯೋಜನೆಗಳನ್ನು ಇಟ್ಟುಕೊಂಡು ಸ್ಪರ್ಧಿಸುವುದಾಗಿ ಅವರು ಹೇಳಿದರು. ಇದೇ ದಿನಾಂಕ 17ರಂದು ನಾಮಪತ್ರ ಸಲ್ಲಿಸುವುದಾಗಿ ಅವರು ಹೇಳಿದರು. ಬಿ.ಪಿ. ವಿಜಯಗೌಡ್ರು ಎಲೆಬೇತೂರು, ಹನುಮೇಶ್ ಬಿಳಿಚೋಡು, ರೇವಣ್ಣ ಮೆಳ್ಳೇಕಟ್ಟೆ ಪತ್ರಿಕಾಗೋಷ್ಠಿಯಲ್ಲಿದ್ದರು.

# ನಗರದ ವಿವಿಧ ವೃತ್ತದಲ್ಲಿ ಭೀಮ್ ಸೇನೆಯಿಂದ ಪಥಸಂಚಲನ

ದಾವಣಗೆರೆ, ಏ.14- ನಗರದ ಅಂಬೇಡ್ಕರ್ ವೃತ್ತದಲ್ಲಿ ಶುಕ್ರವಾರ ಕರ್ನಾಟಕ ಭೀಮ್ ಸೇನೆಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತ್ಯೋತ್ಸವದ ಪ್ರಯುಕ್ತ ಅಂಬೇಡ್ಕರ್ ಪುತ್ಥಳಿಗೆ ಹಾಲಿನ ಅಭಿಷೇಕ ಮಾಡುವ ಜೊತೆಗೆ, ಮಾಲಾರ್ಪಣೆ ಮಾಡಿ ಭಾವಚಿತ್ರದ ಅದ್ದೂರಿ ಮೆರವಣಿಗೆ ನಡೆಸಲಾಯಿತು.

ಈ ವೇಳೆ ಸೇನೆಯ ಜಿಲ್ಲಾಧ್ಯಕ್ಷ ಆರ್. ಸೂರ್ಯನಾರಾಯಣ್ ಮಾತನಾಡಿ, ದೇಶದಲ್ಲಿನ ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಹಗಲಿರುಳು ಶ್ರಮಿಸಿ ಸಮ ಸಮಾಜದ ಬಲವರ್ಧನೆಗೆ ದಿಟ್ಟತನದಿಂದ ಹೋರಾಡಿದವರು ಡಾ. ಬಿ. ಆರ್. ಅಂಬೇಡ್ಕರ್ ಅವರು. ದೇಶದ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಜ್ವಲಂತ ಸಮಸ್ಯೆಗಳಿಗೆ ವೈಜ್ಞಾನಿಕ ಸುಧಾರಣೆಗಳನ್ನು ಆವಿಷ್ಕರಿಸುವ ಮೂಲಕ ದೇಶದ ಭದ್ರತೆಗೆ ಸಂವಿಧಾನವನ್ನು ರಚಿಸಿದ್ದಾರೆ. ಅವರ ಮೌಲ್ಯಯುತ ಚಿಂತನೆ ಮತ್ತು ಸಾಧನೆಯನ್ನು ಯುವ ಜನಾಂಗ ಸ್ಮರಿಸಿಕೊಂಡು ಹೊಸತನದ ಸಮಾಜಕ್ಕೆ ಸ್ವತಂತ್ರ ಮನಸ್ಸಿನಂದ ತೆರೆದುಕೊಳ್ಳಬೇಕಿದೆ ಎಂದರು.

ಮೆರವಣಿಗೆಯು ಅಂಬೇಡ್ಕರ್ ವೃತ್ತದಿಂದ ಪ್ರಾರಂಭವಾಗಿ ಜಯದೇವ ವೃತ್ತ, ಗಾಂಧೀ ವೃತ್ತ, ಪಿ.ಬಿ ರಸ್ತೆ, ಎವಿಕೆ ಕಾಲೇಜ್ ರಸ್ತೆ, ನಾಯಕರ ಹಾಸ್ಟೆಲ್ ರಸ್ತೆ ಮಾರ್ಗವಾಗಿ ಸಂಚರಿಸಿ ಮರಳಿ ಅಂಬೇಡ್ಕರ್ ವೃತ್ತದಲ್ಲಿ ಕೊನೆಗೊಂಡಿತು.

ಈ ಸಂದರ್ಭದಲ್ಲಿ ಸೇನೆಯ ಚಂದ್ರಪ್ಪ, ಮೈಲಾರಿ, ಸಾಗರ್ ಎಲ್.ಹೆಚ್, ರಂಗನಾಥ್, ವಿನಾಯಕ, ಗಣೇಶ್, ಸಂತೋಷ್ ಎಂ, ರಮೇಶ್ ಆರ್, ರಾಘವೇಂದ್ರ ಕೆ ಸೇರಿದಂತೆ ಮಂಗಳಮುಖಿಯರು, ದಮನಿತ ಮಹಿಳೆಯರು, ವಿವಿಧ ಸಂಘಟನೆಯ ಪದಾಧಿಕಾರಿಗಳು, ಮುಖಂಡರುಗಳು, ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಓದುಗರ ಪತ್ರ

### ರೈಲು ನಿಲ್ದಾಣದಲ್ಲಿ ಮೂಲಭೂತ ಸೌಕರ್ಯ ಹೆಚ್ಚಿಸಬೇಕು

**ಮಾನ್ಯರೇ,**

ದಾವಣಗೆರೆ ರೈಲು ನಿಲ್ದಾಣ ನೈಋತ್ಯ ರೈಲ್ವೆಯ, ಮೈಸೂರು ವಿಭಾಗದಲ್ಲಿ 2ನೇ ಅತಿ ಹೆಚ್ಚು ಆದಾಯ ತಂದು ಕೊಡುವ ನಿಲ್ದಾಣ.

ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ ಹೆಚ್ಚಿನ ಸೌಕರ್ಯ ಕಲ್ಪಿಸಬೇಕು - ಟ್ರೋಲಿ ಪಾತ್, ಅಂಗವಿಕಲರ ಹಾಗೆ ಸೀನಿಯರ್ ಸಿಟಿಜನ್ಸ್‌ಗೆ ನಿಲ್ದಾಣದ ಮುಖ್ಯ ದ್ವಾರದಿಂದ ರೈಲಿನ ಕೋಚ್ ಮುಟ್ಟಲು ಬ್ಯಾಟರಿ ಚಾಲಿತ ಕಾರ್ ಹಾಗು ಪ್ರಯಾಣಿಕರಿಗೆ ಕೈಗೆಟುಕುವ ಬೆಲೆಯಲ್ಲಿ ಊಟ ಹಾಗು ತಿಂಡಿ ಪೂರೈಸುವ ಸಸ್ಯಹಾರಿ ಕ್ಯಾಂಟೀನ್ ಮುಂತಾದ ಸೌಲಭ್ಯಗಳನು ಕಲ್ಪಿಸಬೇಕು.

ಟಿಕೆಟ್ ಪಡೆಯಲು ಪ್ರಯಾಣಿಕರು ಜನ ದಟ್ಟಣೆಯಲ್ಲಿ ಹರಸಾಹಸ ಪಡಬೇಕಾಗುತ್ತದೆ. ರೈಲು ಬರುವ ಸಮಯದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚಿನ ಕೌಂಟರ್‌ಗಳಲ್ಲಿ ಟಿಕೆಟ್ ನೀಡಬೇಕು ಹಾಗು ರೈಲು ನಿಲ್ದಾಣದಲ್ಲಿ ಪ್ರಯಾಣಿಕರು ಕುಳಿತುಕೊಳಲು ಹೆಚ್ಚಿನ ಬೆಂಚಿನ ವ್ಯವಸ್ಥೆ ಮಾಡಬೇಕು. ರೈಲ್ವೆ ಸ್ಟೇಷನ್‌ನಲ್ಲಿ ಪ್ರಿ-ಪೇಡ್ ಆಟೋ ಕೌಂಟರ್ ಇದೆ, ಅದನ್ನು ಆದಷ್ಟು ಬೇಗ ಪ್ರಯಾಣಿಕರ ಅನುಕೂಲಕ್ಕಾಗಿ ತೆರೆಯಬೇಕು, ರಾತ್ರಿ ಸಮಯದಲ್ಲಿ ಪ್ರಯಾಣಿಕರ ಸುರಕ್ಷತೆಗೆ ಪೋಲಿಸ್ ಇಲಾಖೆ ಗಸ್ತು ಹೆಚ್ಚಿಸಬೇಕು

**- ರೋಹಿತ್ ಎಸ್. ಜೈನ್,** ಕಾರ್ಯದರ್ಶಿ
ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಸಂಘ, ದಾವಣಗೆರೆ

# ಅಂಬೇಡ್ಕರ್ ಸಂವಿಧಾನದಿಂದ ಮುಸ್ಲಿಂ ಜನಾಂಗಕ್ಕೆ 2ಬಿ ಮೀಸಲಾತಿ ಸಿಗಲು ದಾರಿ



## ಬೀಡಿ ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ವಿವಿದೋದ್ದೇಶ ಕಲ್ಯಾಣ ಸಹಕಾರ ಸಂಘದ ಅಧ್ಯಕ್ಷ ಎಂ. ರಾಜಾಸಾಬ್

ದಾವಣಗೆರೆ, ಏ. 14 - ಡಾ. ಬಿ.ಆರ್. ಅಂಬೇಡ್ಕರ್ ಭಾರತ ದೇಶಕ್ಕೆ ಸಂವಿಧಾನ ಬರೆದು ಇತಿಹಾಸ ನಿರ್ಮಾಣಕ್ಕೆ ಕೈ ಜೋಡಿಸಿದ್ದಾರೆ ಎಂದು ಜೆ.ಡಿ. ಎಸ್. ರಾಜ್ಯ ಕಾರ್ಮಿಕ ವಿಭಾಗದ ಹಿರಿಯ ಮುಖಂಡ ಹಾಗೂ ಬೀಡಿ ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ವಿವಿದೋದ್ದೇಶ ಕಲ್ಯಾಣ ಸಹಕಾರ ಸಂಘದ ಅಧ್ಯಕ್ಷ ಎಂ. ರಾಜಾಸಾಬ್ ತಿಳಿಸಿದರು.

ಜನತಾದಳ ಕಾರ್ಮಿಕ ಸಂಘದ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅಂಬೇಡ್ಕರ್ ಬರೆದ ಸಂವಿಧಾನ ಮುಂಬರುವ ದಿನಗಳಲ್ಲಿಯು ಸರ್ವ ಜನಾಂಗಕ್ಕೂ ನ್ಯಾಯ ಸಿಗುವಂತಿದೆ ಎಂದ ಅವರು ಇತ್ತೀಚಿನ ದಿನಗಳಲ್ಲಿ ಕೆಲ ದುಷ್ಟ ಶಕ್ತಿಗಳು ಸಂವಿಧಾನವನ್ನೆ ತಿರುಚಲು ಪ್ರಯತ್ನಿಸುತ್ತಿರುವುದು ವಿಷಾದದ ಸಂಗತಿ ಎಂದರು.

ಅಂಬೇಡ್ಕರ್ ಸಂವಿಧಾನದಿಂದ ಮುಸ್ಲಿಂ ಜನಾಂಗಕ್ಕೆ 2ಬಿ ಮೀಸಲಾತಿ ಸಿಗುವುದಕ್ಕೆ ದಾರಿಯಾಗಿತ್ತು. ಆದರೆ ಈ ದಿನ ಸರ್ಕಾರ ಮೀಸಲಾತಿ ರದ್ದು ಮಾಡಿ ಇಲ್ಲದವರಿಂದ ಕಿತ್ತುಕೊಂಡು ಇದ್ದಂತವರಿಗೆ ಕೊಟ್ಟಿದ್ದು ಅದರ ಪರಿಣಾಮ ಮುಂಬರುವ ದಿನಗಳಲ್ಲಿ ತಕ್ಕ ಉತ್ತರ ಕೊಡಲಿದ್ದೇವೆ ಅಲ್ಲದೆ. ಹೋರಾಟದ ಮೂಲಕ ನಮ್ಮ ಹಕ್ಕನ್ನು ಮತ್ತೆ ಪಡೆಯಲಿದ್ದೇವೆ ಎಂದು ಪರೋಕ್ಷವಾಗಿ ಬಿಜೆಪಿ ಸರ್ಕಾರವನ್ನು ಟೀಕಿಸಿ ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಎಲ್. ಜಯಣ್ಣ, ದಾದಾಪೀರ್, ಮಾಸೂಮ್ ಸ್ತ್ರೀ ಶಕ್ತಿ ಸ್ವಸಹಾಯ ಸಂಘದ ಅಧ್ಯಕ್ಷೆ ರಮೀಜಾ ಬಿ, ಸೇರಿದಂತೆ ಅನೇಕರು ಭಾಗವಹಿಸಿದ್ದರು. ಶ್ರೀಮತಿ ಲೀನಾ ಪ್ರಾರ್ಥಿಸಿದರೆ, ಶ್ರೀಮತಿ ಹುಸ್ನಾಬಾನು ವಂದಿಸಿದರು.



## ಜಿಲ್ಲಾಡಳಿತದಿಂದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ

ದಾವಣಗೆರೆ, ಏ. 14- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಮಹಾನಗರ ಪಾಲಿಕೆ ವತಿಯಿಂದ ಶುಕ್ರವಾರ ಜಿಲ್ಲಾಡಳಿತ ಕಛೇರಿ ಸಭಾಂಗಣದಲ್ಲಿ ಜರುಗಿದ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಪುಷ್ಪಾರ್ಚನೆ ಮಡುವ ಮೂಲಕ ಆಚರಿಸಲಾಯಿತು.

ಕಲಾವಿದರಾದ ಐರಣಿ ಚಂದ್ರು ಜಾಗೃತಿ ಗೀತೆ ಹಾಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ ರಿಷ್ಯಂತ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ನಾಗರಾಜ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಡಿ.ಡಿ ಮಂಜಾನಾಯ್ಕ್, ಅಲ್ಪ ಸಂಖ್ಯಾತ ವರ್ಗಗಳ ಕಲ್ಯಾಣಾಧಿಕಾರಿ ಮಲ್ಲಿಕಾರ್ಜುನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಕಬ್ಬಳ್ಳಿ ಮೈಲಪ್ಪ, ರೈತ ಸಂಘದ ಕಾರ್ಯಾಧ್ಯಕ್ಷ ಚಿನ್ನಸಮುದ್ರ ಶೇಖರ್ ನಾಯ್ಕ್, ಸಮಗಾರ ಸಮಾಜದ ಜಿಲ್ಲಾಧ್ಯಕ್ಷ ಫಕ್ಕೀರಪ್ಪ ಉಪಸ್ಥಿತರಿದ್ದರು.

# ನಿಮಗೆ ಜಾತಿ ಬೇಕೋ? ಬದುಕು ಬೇಕೋ?

## ರಾಣೇಬೆನ್ನೂರಿನ ವಿಧಾನಸಭೆ ಚುನಾವಣೆ ಬಹಿರಂಗ ಸಭೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನೆ



ರಾಣೇಬೆನ್ನೂರು, ಏ.14- ಬಿಜೆಪಿ ಬಡವರ ಬದುಕನ್ನು ಬೀದಿಗೆ ತಂದಿದೆ. 'ಪಂಚರತ್ನ' ಯೋಜನೆ ಮೂಲಕ ನಿಮಗೆ ಬದುಕು ಕಟ್ಟಿಕೊಡುತ್ತೇನೆ. ನಿಮಗೆ ಜಾತಿ ಬೇಕೋ? ಬದುಕು ಬೇಕೋ? ಎಂಬುದನ್ನು ನೀವೇ ತೀರ್ಮಾನ ಮಾಡಿಕೊಳ್ಳಿ. ಬದುಕು ಕಟ್ಟಿಕೊಳ್ಳುವುದಾದರೆ ಜೆಡಿಎಸ್‌ಗೆ ಮತ ನೀಡಿರಿ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಇಲ್ಲಿನ ನಗರಸಭೆ ಕ್ರೀಡಾಂಗಣದಲ್ಲಿ ನಡೆದ ವಿದಾನಸಭೆ ಚುನಾವಣೆ ಬಹಿರಂಗ ಸಭೆಯಲ್ಲಿ ಜೆಡಿಎಸ್ ಅಭ್ಯರ್ಥಿ ಮಂಜುನಾಥ ಗೌಡಶಿವಣ್ಣರಿಗೆ ಮತ ನೀಡುವಂತೆ ಮನವಿ ಮಾಡುತ್ತಿದ್ದರು.

ಹಿಂದೆ ನಾನು ಮುಖ್ಯಮಂತ್ರಿ ಆದ ಎರಡು ಅವಧಿಯಲ್ಲೂ ರೈತರ ಸಾಲ ಮನ್ನಾ ಮಾಡಿದೆ. ಅಧಿಕಾರ ಇಲ್ಲದ ಸಂದರ್ಭದಲ್ಲೂ ಸಹ ಹಾವೇರಿ ಜಿಲ್ಲೆಯ ಮಾಕನೂರು, ನಾಗೇನಹಳ್ಳಿ, ರಟ್ಟಿಹಳ್ಳಿ, ಹಾವೇರಿ, ಹಂದಿಗನೂರು ಮುಂತಾದೆಡೆ ಆತ್ಮಹತ್ಯೆ ಅಥವಾ ಇನ್ನಿತರೆ ಕಾರಣಗಳಿಂದ ತೊಂದರೆ ಅನುಭವಿಸುತ್ತಿದ್ದವರಿಗೆ ವೈಯಕ್ತಿಕವಾಗಿ ಸಹಾಯ ಮಾಡಿದ್ದೇನೆ ನನಗೇಕೆ ಅನ್ಯಾಯ ಮಾಡುತ್ತೀರಿ ಎಂದು ಕುಮಾರಸ್ವಾಮಿ ಮತದಾರರನ್ನು ಪ್ರಶ್ನಿಸಿದರು.

ಪಕ್ಷೇತರರಾಗಿ ಆರಿಸಿ ಬಂದಿದ್ದ ನಿಮ್ಮ ಶಾಸಕ ಶಂಕರ್ ಅವರನ್ನ ಮಂತ್ರಿ ಮಾಡಿದ್ದೆ. ಅವರಿಗೆ ಏನು ಅನ್ಯಾಯವಾಗಿತ್ತು ಎಂದು ನನ್ನ ಸರ್ಕಾರ ಕೆಡವಲು ಕಾರಣರಾದರು. ಬಿಜೆಪಿ ಮಂತ್ರಿ ಮಾಡದೇ ಕೇವಲ ಎಮ್ಮೆಲ್ಸಿ ಮಾಡಿತು. ಅದಕ್ಕೂ ರಾಜಿನಾಮೆ ನೀಡಿ ಈಗ ಮತ್ತೆ ಪಕ್ಷೇತರರಾಗಿ ಶಾಸಕರಾಗಲು ಪ್ರಯತ್ನ ನಡೆಸಿದ್ದಾರೆ ಎಂದು ಕುಮಾರಸ್ವಾಮಿ ಕುಟುಕಿದರು.

ಹಿರೇಕೆರೂರು ಮಹಾನುಭಾವರು ಯಾರು ಮಾಡದ ಸಾಧನೆ ಮಾಡಿದ್ದಾರೆ. ಅಧಿಕಾರಿಗಳು, ಜವಾನರ ವರ್ಗಾವಣೆಯಲ್ಲೂ ಹಣದ ಲೂಟಿ ಮಾಡಿದ್ದಾರೆ. ಇಂಥವರು ನನ್ನ ಬಗ್ಗೆ ಮಾತನಾಡುತ್ತಾರೆ. ಅಂತವರ ಬಗ್ಗೆ ಮಾತನಾಡಲು ನನಗೆ ಇಷ್ಟವಿಲ್ಲ ಎಂದು ಬಿ.ಸಿ. ಪಾಟೀಲ ವಿರುದ್ಧ ಹರಿಹಾಯ್ದರು.

ಪ್ರತಿದಿನ ಜೆಡಿಎಸ್ ನತ್ತ ಜನರು ಬರುತ್ತಿದ್ದಾರೆ. ಆ ಮೂಲಕ ಶಕ್ತಿ ಹೆಚ್ಚುತ್ತಿದೆ. ಈ ವಾತಾವರಣ ಭಗವಂತನಿಂದ ಸೃಷ್ಟಿಯಾಗುತ್ತಿದೆ. ನನಗೆ 120ಕ್ಕೂ ಹೆಚ್ಚು ಸ್ಥಾನಗಳನ್ನು ನೀಡಿ ಸಂಪೂರ್ಣ ಬಲದೊಂದಿಗೆ ಸರ್ಕಾರ ರಚಿಸಲು ಒಮ್ಮೆ ಅವಕಾಶ ಕಲ್ಪಿಸಿ, ರಾಜ್ಯದ ಜನರ ಬದುಕನ್ನು ಬದಲಾಯಿಸುತ್ತೇನೆ ಎಂದು ಮನವಿ ಮಾಡಿದರು.

ಬೀದರ್‌ನಿಂದ ಹೆಲಿಕ್ಯಾಪ್ಟರ್ ಮೂಲಕ ಬಂದ ಕುಮಾರಸ್ವಾಮಿ ಜೊತೆ ವೇದಿಕೆಯಲ್ಲಿ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಅಲ್ಪ ಸಂಖ್ಯಾತ ವಿಭಾಗ ಅಧ್ಯಕ್ಷ ಶಂಷುದ್ದೀನ್, ರಾಣೇಬೆನ್ನೂರು ಕ್ಷೇತ್ರದ ಅಭ್ಯರ್ಥಿ ಮಂಜುನಾಥ ಗೌಡಶಿವಣ್ಣನವರ, ಪತ್ನಿ ಶೈಲಜಾ ಗೌಡಶಿವಣ್ಣನವರ, ಜಿಲ್ಲೆ ಹಾಗೂ ತಾಲ್ಲೂಕಿನ ಪಕ್ಷದ ಪದಾಧಿಕಾರಿಗಳು ಇದ್ದರು.

## ರಾಣೇಬೆನ್ನೂರಿನಲ್ಲಿ ನಾಳೆ ಕಾಶಿ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ



ರಾಣೇಬೆನ್ನೂರು, ಏ. 14- ಶ್ರೀ ಹಿರೇಮಠ ಸಂಸ್ಕೃತಿ ಸಂರಕ್ಷಣಾ ಸಮಿತಿ ವತಿಯಿಂದ ರಾಷ್ಟ್ರದ ಎರಡನೇ, ರಾಜ್ಯದ ಮೊದಲನೇಯದಾಗಿರುವ ನಗರದ ಹೊರವಲಯದ ಶ್ರೀ ಶನೇಶ್ಚರ ಸ್ವಾಮಿಯ ಬಯಲು ಆಲಯ ದ್ವಾದಶ ಪ್ರತಿಷ್ಠಾ ಮಹೋತ್ಸವದ ನಿಮಿತ್ತ ಲೋಕ ಕಲ್ಯಾಣಾರ್ಥ ಹಾಗೂ ಪ್ರಾಚೀನ ಧರ್ಮ ಪರಂಪರೆಯ ಸಂವರ್ಧನೆಗಾಗಿ ನಿರಂತರ 593 ದಿನಗಳ ಕಾಲ ಜರುಗುವ ಅಷ್ಟಬಂಧ ಬ್ರಹ್ಮಕಲಶೋತ್ಸವ, ಶ್ರೀ ಮಹಾತಪಸ್ವಿ ಸಿದ್ದಲಿಂಗ ಜಗದ್ಗುರುಗಳವರ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮವು ನಾಡಿದ್ದು ದಿನಾಂಕ 16ರಂದು ಮಧ್ಯಾಹ್ನ 12 ಘಂಟೆಗೆ ಕಾಶಿ ಜಗದ್ಗುರು ಡಾ. ಮಲ್ಲಿಕಾರ್ಜುನ ಶಿವಾಚಾರ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಜಂಗಮರಾಧನೆ, ಮನುಕುಲ ಧರ್ಮ ಸಮಾರಂಭವು ನಡೆಯಲಿದೆ.

ಇದಕ್ಕೂ ಮುನ್ನ ಇಲ್ಲಿನ ದೊಡ್ಡಪೇಟೆಯ ಬಸವೇಶ್ವರ ದೇವಸ್ಥಾನದಿಂದ ಉತ್ಸವ ಆರಂಭವಾಗುವುದು. ಅಂದು ಸಂಜೆ 5 ಗಂಟೆಗೆ ಯಾಗ ಶಾಲೆ ಪ್ರವೇಶೋತ್ಸವ, ಮತ್ತು 593 ದಿನಗಳ ಕಾಲ ಜರುಗುವ ಧಾರ್ಮಿಕ ಸಮಾರಂಭಕ್ಕೆ ವಿಧ್ಯುಕ್ತ ಚಾಲನೆ, ಧರ್ಮ ಧ್ವಜಾರೋಹಣ, ಕಂಕಣಾರಾಧನೆ ನಡೆಯಲಿದೆ ಎಂದು ಶ್ರೀಮಠದ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದ್ದಾರೆ.

## ಅಂಬೇಡ್ಕರ್ ತಾಣಗಳಿಗೆ ಭೇಟಿ ನೀಡಲು ವಿಶೇಷ ಪ್ರವಾಸಿ ರೈಲಿಗೆ ಚಾಲನೆ


ನವದೆಹಲಿ, ಏ. 14 – ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ನಗರಗಳಿಗೆ ಭೇಟಿ ನೀಡಲು ವಿಶೇಷ ಪ್ರವಾಸಿ ರೈಲೊಂದಕ್ಕೆ ಚಾಲನೆ ನೀಡಲಾಗಿದೆ.

ಅಂಬೇಡ್ಕರ್ ಅವರ ಜನ್ಮ ದಿನದಂದು ಭಾರತ್ ಗೌರವ್ ಪ್ರವಾಸಿ ರೈಲಿಗೆ ಚಾಲನೆ ನೀಡಲಾಗಿದೆ. ರೈಲಿಗೆ ಕೇಂದ್ರ ಪ್ರವಾಸೋದ್ಯಮ ಸಚಿವ ಜಿ. ಕಿಶನ್ ರೆಡ್ಡಿ ಹಾಗೂ ಸಾಮಾಜಿಕ ನ್ಯಾಯ ಸಚಿವ ವೀರೇಂದ್ರ ಕುಮಾರ್ ಅವರು ಹಜರತ್ ನಿಜಾಮುದ್ದೀನ್ ರೈಲ್ವೆ ನಿಲ್ದಾಣದಲ್ಲಿ ಹಸಿರು ನಿಶಾನೆ ತೋರಿದ್ದಾರೆ.

ಎಂಟು ದಿನಗಳ ಕಾಲ ಈ ರೈಲು ಸಂಚಾರ ನಡೆಸಲಿದೆ.

ದೆಹಲಿ, ನಾಗಪುರ, ಸಾಂಚಿ, ಸಾರನಾಥ, ಗಯಾ, ರಾಜಗಿರಿ ಹಾಗೂ ನಳಂದ ಸೇರಿದಂತೆ ಹಲವು ನಗರಗಳಿಗೆ ರೈಲು ಭೇಟಿ ನೀಡಲಿದೆ.

## ವರಾಹ ರೂಪಂ ಹಾಡಿಗೆ ಒಟಿಟಿಯಲ್ಲಿ ತಡೆ



ಕೋಳಿಕ್ಕೋಡ್, ಏ. 14 - ಕಾಂತಾರ ಚಿತ್ರದ ವರಾಹ ರೂಪಂ ಹಾಡು ಪ್ರಸಾರ ಮಾಡದಂತೆ ಕೇರಳ ನ್ಯಾಯಾಲಯ ಮಧ್ಯಂತರ ಆದೇಶ ಹೊರಡಿಸಿದೆ. ಚಿತ್ರಮಂದಿರಗಳಲ್ಲೇ ಒ.ಟಿ.ಟಿ. ಮತ್ತಿತರೆ ವೇದಿಕೆಗಳಲ್ಲೂ ಹಾಡು ಪ್ರಸಾರ ಮಾಡಬಾರದು ಎಂದು ನಿರ್ಬಂಧಿಸಲಾಗಿದೆ.

ಹೆಚ್ಚುವರಿ ಪ್ರಥಮ ಜಿಲ್ಲಾ ನ್ಯಾಯಮೂರ್ತಿ ಕೆ.ಇ. ಸಲೀಹ್ ಅವರು ಈ ಆದೇಶ ಹೊರಡಿಸಿದ್ದು, ವರಾಹ ರೂಪಂ ಹಾಡಿಗಾಗಿ ತೈಕ್ಕುಂಡಮ್ ಬ್ರಿಡ್ಜ್ ಹಾಗೂ ಮಾತೃಭೂಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿಗೆ ಸೂಕ್ತ ಶ್ರೇಯ ಸಲ್ಲಬೇಕಿದೆ ಎಂದು ತಿಳಿಸಿದ್ದಾರೆ. ಕಳೆದ ವರ್ಷ ಸೆಪ್ಟೆಂಬರ್ 30ರಂದು ಚಿತ್ರ ಬಿಡುಗಡೆಯಾದ ನಂತರ ಕಾನೂನು ಹೋರಾಟ ಆರಂಭವಾಗಿತ್ತು.

ನವರಸಂ ಹಾಡಿನಿಂದ ಸ್ಫೂರ್ತಿ ಪಡೆದಿದ್ದಾಗಿ ಚಿತ್ರದ ಸಂಗೀತ ನಿರ್ದೇಶಕರೇ ಹೇಳಿದ್ದಾರೆ ಎಂದೂ ನ್ಯಾಯಾಲಯ ತಿಳಿಸಿದೆ.

## ಅಬಕಾರಿ ನೀತಿ ಹಗರಣ : ಕೇಜ್ರಿವಾಲ್‌ಗೆ ಸಿಬಿಐ ಸಮನ್ಸ್



ನವದೆಹಲಿ, ಏ. 14 – ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್‌ಗೆ ಸಿ.ಬಿ.ಐ. ಸಮನ್ಸ್ ಕಳಿಸಿದೆ. ದೆಹಲಿಯ ಮಾಜಿ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಈಗಾಗಲೇ ಈ ಪ್ರಕರಣದಲ್ಲಿ ಸಿಲುಕಿ ಬಂಧಿತರಾಗಿದ್ದಾರೆ. ಏ.16 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ತನ್ನ ಕೇಂದ್ರ ಕಚೇರಿಗೆ ಹಾಜರಾಗಿ ಪ್ರಕರಣದ ಕುರಿತ ಪ್ರಶ್ನೆಗಳಿಗೆ ಸಾಕ್ಷಿಯಾಗಿ ಉತ್ತರಿಸುವಂತೆ ಕೇಜ್ರಿವಾಲ್‌ಗೆ ಸಿ.ಬಿ.ಐ. ನೋಟಿಸ್ ಕಳಿಸಿದೆ.

ಅಬಕಾರಿ ನೀತಿ ತಿರುಚುವ ಮೂಲಕ ಲಿಕ್ಕರ್ ಡೀಲರ್‌ಗಳಿಂದ ಆಮಿಷಗಳನ್ನು ಪಡೆಯಲಾಗಿದೆ ಎಂದು ಪ್ರಕರಣ ದಾಖಲಿಸಲಾಗಿದೆ. ಈ ಹಣದ ಹರಿವಿನ ಬಗ್ಗೆ ಸಿ.ಬಿ.ಐ. ತನಿಖೆ ನಡೆಸುತ್ತಿದೆ. ನೀತಿ ರೂಪಿಸುವಿಕೆ ಹಾಗೂ ಲಾಬಿಗಳು ಮತ್ತು ಹಲವು ಹಂತಗಳಲ್ಲಿ ನೀತಿಯ ಕರಡು ಬದಲಾಗಿರುವ ಬಗ್ಗೆ ಮುಖ್ಯಮಂತ್ರಿಗೆ ಮಾಹಿತಿ ಇರುತ್ತದೆ. ಈ ಹಿನ್ನೆಲೆಯಲ್ಲಿ ಅವರನ್ನು ಪ್ರಶ್ನಿಸುವ ಅಗತ್ಯವಿದೆ ಎಂದು ಸಿ.ಬಿ.ಐ. ಮೂಲಗಳು ತಿಳಿಸಿವೆ.

ಅಬಕಾರಿ ನೀತಿ ಆರಂಭಿಕ ಹಂತದಲ್ಲಿದ್ದ ಸಂದರ್ಭದಲ್ಲಿನ ಕಡತದ ಬಗ್ಗೆಯೂ ಕೇಜ್ರಿವಾಲ್‌ಗೆ ಪ್ರಶ್ನಿಸುವ ಸಾಧ್ಯತೆ ಇದೆ. ಈ ಕಡತ ಇನ್ನೂ ಪತ್ತೆಯಾಗಿಲ್ಲ ಎಂದು ಮೂಲಗಳು ಹೇಳಿವೆ.

ಪ್ರಸಕ್ತ ಸಾಕ್ಷಿಯಾಗಿ ವಿವರ ಪಡೆಯಲಾಗುವುದು. ಪ್ರಕರಣದ ಹಲವಾರು ಆಯಾಮಗಳನ್ನು ಪರಿಗಣಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ಹೇಳಿವೆ. ವಿಚಾರಣೆ ಹಿನ್ನೆಲೆಯಲ್ಲಿ ಸಿ.ಬಿ.ಐ. ಕೇಂದ್ರ ಕಚೇರಿಯ ಸುತ್ತ ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಈ ನಡುವೆ ಹೇಳಿಕೆ ನೀಡಿರುವ ಆಮ್ ಆದ್ಮಿ ಪಾರ್ಟಿ, ಕೇಜ್ರಿವಾಲ್‌ಗೆ ಸಿ.ಬಿ.ಐ. ಸಮನ್ಸ್ ಕಳಿಸಿರುವುದು ರಾಜಕೀಯ ಸೇಡಿನ ಕ್ರಮ ಎಂದು ಆರೋಪಿಸಿದೆ.

# ಗಡ್ಕರಿ ಹತ್ಯೆಗೆ ಸಂಚು ನಡೆಸಿದವರಿಂದಲೇ ಬೆದರಿಕೆ



ಬೆಂಗಳೂರು, ಏ. 14 - ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಹತ್ಯೆಗೆ ಸಂಚು ನಡೆಸಿರುವವರೇ ತಮಗೂ ಕೊಲೆ ಬೆದರಿಕೆ ಯೊಡ್ಡಿದ್ದಾರೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿಯ ಹಿಂಡಲಗ ಜೈಲಿನಲ್ಲಿದ್ದ ಜಯೇಶ್ ಪೂಜಾರಿ ಅಲಿಯಾಸ್ ಶಾಹಿದ್ ಶೇಖ್ ತಮ್ಮ ಕೊಲೆಗೆ ಸ್ಕೆಚ್ ಹಾಕಿರೋ ವಿಚಾರ ಗೊತ್ತಾಗಿದೆ.

ಈ ವ್ಯಕ್ತಿಗಳು ಗಡ್ಕರಿ ಅವರಿಗೆ ಬೆದರಿಕೆ ಹಾಕಿದ್ದರು. ನನ್ನ ಕೊಲೆಗೂ ಪಿತೂರಿ ನಡೆಸಿದ್ದಾರೆ ಎಂದು ಹೇಳಿದರು.

ಬೆದರಿಕೆ ಸಂಬಂಧ ಗೃಹ ಸಚಿವ ಆರಗ ಜ್ಞಾನೇಂದ್ರ, ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆಗೆ ಮಾತನಾಡಿದ್ದೇನೆ. ಈ ಆರೋಪಿಯ ಹಿಂದೆ ಪಿಎಫ್‌ಐ ನವರ ಬೆಂಬಲ ಇದೆ ಎಂದು ಹೇಳಿದರು.

ಈ ಹಿಂದೆಯೂ ಕೊಲೆ ಬೆದರಿಕೆ ಬಗ್ಗೆ ಕರೆ ಬಂದಿತ್ತು. ಅಧಿವೇಶನದಲ್ಲಿಯೇ ಹೇಳಿದ್ದೆ ಆಗ ಕಾಂಗ್ರೆಸ್ ಸರ್ಕಾರವಿತ್ತು ನನಗೆ ಭದ್ರತೆ ನೀಡಿದ್ದರು ಎಂದು ತಿಳಿಸಿದರು.

ಈ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಯಾವುದೇ ಬೆದರಿಕೆಗೆ ಬಗ್ಗಲ್ಲ. ಹಿಂದುತ್ವ ವಾದಿಗಳಿಗೆ ಬೆದರಿಕೆ ಸಾಮಾನ್ಯ. ಆದರೆ ನನ್ನ ನಿಲುವು ಬದಲಾಯಿಸಲ್ಲ, ಪೊಲೀಸರು ನನಗೆ ನೀಡಿದ ಮಾಹಿತಿ ಬಹಿರಂಗ ಪಡಿಸಿದ್ದೇನೆ ಎಂದು ಹೇಳಿದರು.


ಪಕ್ಷದ ರಾಷ್ಟ್ರೀಯ ಮುಖಂಡ ಧರ್ಮೇಂದ್ರ ಪ್ರಧಾನ್ ಕರೆ ಮಾಡಿ ಚುನಾವಣಾ ರಾಜಕೀಯ ಬೇಡ ಎಂದು ಹೇಳಿದ್ದಾರೆ. ಪಕ್ಷದ ಶಿಸ್ತಿನ ಸಿಪಾಯಿಯಂತೆ ಅವರು ಹೇಳಿದಂತೆ ಚುನಾವಣಾ ನಿವೃತ್ತಿ ಪತ್ರ ಬರೆದು ಕಳುಹಿಸಿದ್ದೇನೆ ಎಂದು ಈಶ್ವರಪ್ಪ ಇದೇ ಸಂದರ್ಭದಲ್ಲಿ ತಿಳಿಸಿದರು.

ಚುನಾವಣೆಯಲ್ಲಿ ಸ್ಪರ್ಧೆ ಮಾಡಲ್ಲ. ಜಗದೀಶ್ ಶೆಟ್ಟರ್ ಲಾಬಿ ವಿಚಾರಕ್ಕೂ ನನಗೂ ಸಂಬಂಧ ಇಲ್ಲ. ನಾನು ಪಕ್ಷ ಹೇಳಿದಂತೆ, ಕೇಳುತ್ತೇನೆ. ಕಾಲ ಕಾಲಕ್ಕೆ ಪಕ್ಷ ಹೇಳಿದಂತೆ ಕೇಳಿಕೊಂಡು ಬಂದಿದ್ದೇನೆ ಎಂದರು.

> **ಮಗನಿಗೆ ಟಿಕೆಟ್ ಕೊಟ್ಟರೇ ಸಂತೋಷ. ಬೂತ್ ಮಟ್ಟದ ಕಾರ್ಯಕರ್ತನಿಂದ ಉಪಮುಖ್ಯಮಂತ್ರಿ ಮಾಡಿದ್ದಾರೆ. ಇದೀಗ ಪಕ್ಷದ ಕೆಲಸ ಮಾಡು ಎಂದಿದ್ದಾರೆ ಮಾಡುತ್ತೇನೆ. ಬಿಜೆಪಿ ಅಧಿಕಾರಕ್ಕೆ ಬರಲು ಯಾವ ಕೆಲಸ ಮಾಡೋದಕ್ಕೆ ಸಿದ್ಧ.**
>
> **- ಕೆ.ಎಸ್. ಈಶ್ವರಪ್ಪ,**
> ಮಾಜಿ ಉಪ ಮುಖ್ಯಮಂತ್ರಿ

## 125 ಅಡಿಯ ಅಂಬೇಡ್ಕರ್ ಪ್ರತಿಮೆ ಉದ್ಘಾಟನೆ

ಹೈದರಾಬಾದ್, ಏ. 14 - ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ 125 ಅಡಿ ಎತ್ತರದ ಪ್ರತಿಮೆಯನ್ನು ತೆಲಂಗಾಣದ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ಉದ್ಘಾಟಿಸಿದ್ದಾರೆ.
ಪ್ರತಿಮೆಯನ್ನು 360 ಟನ್ ಉಕ್ಕು ಹಾಗೂ 114 ಟನ್ ಕಂಚಿನಿಂದ ನಿರ್ಮಿಸಲಾಗಿದೆ.
ಇದರ ನಿರ್ಮಾಣ ವೆಚ್ಚ 146.50 ಕೋಟಿ ರೂ. ರಾಜ್ಯ ವಿಧಾನಸೌಧದ ಪಕ್ಕದಲ್ಲಿ ಈ ಬೃಹತ್ ಪ್ರತಿಮೆಯನ್ನು ನಿರ್ಮಿಸಲಾಗಿದೆ.
ಇದು ಜನರಿಗೆ ಹಾಗೂ ಇಡೀ ರಾಜ್ಯ ಆಡಳಿತಕ್ಕೆ ಸ್ಫೂರ್ತಿಯಾಗಲಿದೆ ಎಂದು ರಾವ್ ಹೇಳಿದ್ದಾರೆ.



## ಎಸ್ಸೆಸ್ಸೆಂ ಗೆಲ್ಲಬೇಕು, ಜಿಲ್ಲೆ ಸರ್ವಾಂಗೀಣ ಅಭಿವೃದ್ಧಿ ಆಗಬೇಕು: ಎನ್‌ಜಿಪಿ ಆಶಯ



ದಾವಣಗೆರೆ, ಏ. 14- ಉತ್ತರ ವಿಧಾನಸಭಾ ಕ್ಷೇತ್ರದ ಜನತೆಯ, ಪಕ್ಷದ ಹಿರಿಯರ, ಮಹಿಳೆಯರ ಆಶೀರ್ವಾದವಿದೆ. ಮತ್ತೊಮ್ಮೆ ಗೆದ್ದು ಬಂದು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿ ಮಾಡುವಂತೆ ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ ಅವರು ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಕಿವಿಮಾತು ಹೇಳಿದರು.

ವಿದ್ಯಾನಗರದಲ್ಲಿ ಮೊನ್ನೆ ನಡೆದ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಗರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿರುವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ದೇವರು ಶಕ್ತಿ ಕೊಟ್ಟಿದ್ದಾನೆ. ಅದನ್ನು ಸದ್ಬಳಕೆ ಮಾಡಿಕೊಂಡು ಜನರ ಮಧ್ಯೆ ಬಂದು ಕೆಲಸ ಮಾಡಬೇಕಾಗಿದೆ. ಎಲ್ಲರಿಗೂ ಸ್ಫೂರ್ತಿಯಾಗಬೇಕಾಗಿದೆ ಎಂದು ಆಶಯ ವ್ಯಕ್ತಪಡಿಸಿದರು.

ಯಾರಿಗೂ ನೀವು ದ್ರೋಹ ಮಾಡಿಲ್ಲ. ಪ್ರಾಮಾಣಿಕ ಕೆಲಸ ಮಾಡಿರುವ ನೀವು ಹಿಂದೇಟು ಹಾಕುವ ಪ್ರಶ್ನೆಯೇ ಇಲ್ಲ, ಅಲ್ಲದೇ ನಿಮಗೆ ಮುಖ್ಯಮಂತ್ರಿ ಆಗುವ ಶಕ್ತಿ, ಅರ್ಹತೆ ಕೂಡಾ ಇದೆ ಎಂದು ಎನ್.ಜಿ.ಪಿ. ಹೇಳಿದರು.

ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್, ಡಾ. ಎಂ.ಜಿ. ಈಶ್ವರಪ್ಪ, ಡಾ. ಹೆಚ್.ಎಸ್.ಮಂಜುನಾಥ್ ಕುರ್ಕಿ, ಬೆಳವನೂರು ನಾಗರಾಜಪ್ಪ ಮತ್ತು ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಬೇಸಿಗೆಯ ಹಿನ್ನೆಲೆಯಲ್ಲಿ ಸಾಮಾಜಿಕ ಸೇವಾ ಸಂಸ್ಥೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ದಾನಿಗಳ ನೆರವಿನೊಂದಿಗೆ 1 ತಿಂಗಳ ಪರ್ಯಂತ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಿಸುವ ಕಾರ್ಯಕ್ರಮವನ್ನು ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಹಮ್ಮಿಕೊಳ್ಳ ಲಾಗಿದೆ.

ಕೃಷ್ಣ ಬೇಕರಿ ಮಾಲೀಕರಾದ ರಾಜಲಕ್ಷ್ಮಿ ಅವರು ಇಂದಿನ ಮಜ್ಜಿಗೆ ದಾನಿಗಳಾಗಿದ್ದಾರೆ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ. ಕರುಣಾ ಜೀವ ಕಲ್ಯಾಣ ಟ್ರಸ್ಟಿನ ಸತ್ಕಾರ್ಯಗಳಾದ ಮಜ್ಜಿಗೆ, ಗಾಡಿ, ಸೈಕಲ್, ನೀರಿನ ಬಾನಿ ವಿತರಣೆ ಇತ್ಯಾದಿಗಳಿಗೆ ದಾನ ಮಾಡಲಿಚ್ಛಿಸುವವರು ಎಂ.ಬಿ. ಮಧುಸೂದನ್ (98806 -02121ಅಥವಾ 95380-24444) ಅವರನ್ನು ಸಂಪರ್ಕಿಸಬಹುದು.

## 5ನೇ ವಾರ್ಡ್‌ನಲ್ಲಿ ಇಂದು ಎಸ್ಸೆಸ್ ಪ್ರಚಾರ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರು ತಮ್ಮ ಪ್ರಚಾರವನ್ನು ಇಂದು ಬೆಳಿಗ್ಗೆ 10.30 ರಿಂದ 5ನೇ ವಾರ್ಡ್‌ನ ರಾಜೀವ್ ಗಾಂಧಿ ಬಡಾವಣೆ ಮತ್ತು ಎಸ್ ಪಿ ಎಸ್ ನಗರದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಆರಂಭಿಸುವರು. ಕಾಂಗ್ರೆಸ್ ಅಧ್ಯಕ್ಷ ಅಯೂಬ್, ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್, ವಾರ್ಡ್ ಅಧ್ಯಕ್ಷರು, ಪದಾಧಿ ಕಾರಿಗಳು, ಕಾರ್ಯಕರ್ತರು ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ. ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## 32ನೇ ವಾರ್ಡಿನಲ್ಲಿ ಇಂದು ಕಾಂಗ್ರೆಸ್ ಚುನಾವಣಾ ಪ್ರಚಾರ



ಮಾಜಿ ಸಚಿವರು, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಇಂದು ಬೆಳಿಗ್ಗೆ 10-30ರಿಂದ ಸಂಜೆ 4 ರವರೆಗೆ 32ನೇ ವಾರ್ಡಿನ ನಿಟುವಳ್ಳಿ, ಚಿಕ್ಕನಹಳ್ಳಿ, ಹೊಸ ಬಡಾವಣೆಯಲ್ಲಿ ಮನೆ ಮನೆಗೆ ತೆರಳಿ ಪ್ರಚಾರ ನಡೆಸುವರು ಎಂದು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಶ್ರೀಮತಿ ಅನ್ನಪೂರ್ಣಮ್ಮ ಪೂಜಾರ್ ಬಸವರಾಜ್ ತಿಳಿಸಿದ್ದಾರೆ.

## ರಾಜಶೇಖರ್ ಬೆನ್ನೂರು ಆಯ್ಕೆ



ದಾವಣಗೆರೆ, ಏ. 14 - ಕಲಾಕುಂಚ ವಿದ್ಯಾನಗರ ಶಾಖೆಯ ನೂತನ ಅಧ್ಯಕ್ಷರಾಗಿ ರಾಜಶೇಖರ್ ಬೆನ್ನೂರು ಆಯ್ಕೆಯಾಗಿದ್ದಾರೆ.

## ಪಾಲಿಕೆ ಕಛೇರಿಯಲ್ಲಿ ಡಾ. ಅಂಬೇಡ್ಕರ್ ಜಯಂತಿ



ದಾವಣಗೆರೆ, ಏ. 14- ಮಹಾ ನಗರ ಪಾಲಿಕೆಯ ಕಛೇರಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಲಾಯಿತು. ಆಯುಕ್ತರಾದ ಶ್ರೀಮತಿ ರೇಣುಕಾ ಅವರು ಅಂಬೇಡ್ಕರ್ ಪುತ್ಥಳಿಗೆ ಹಾರ ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಿಇಒ ಓಂಕಾರಪ್ಪ, ಕಂದಾಯ ವಿಭಾಗದ ಉಪ ಆಯುಕ್ತರಾದ ಶ್ರೀಮತಿ ಲಕ್ಷ್ಮಿ, ಅಧಿಕಾರಿ ವರ್ಗದವರು, ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಮಾಯಕೊಂಡದಲ್ಲಿ 11 ಬಂಡಾಯ ಅಭ್ಯರ್ಥಿಗಳ ಪರ ಶಿವಪ್ರಕಾಶ್ ಕಣಕ್ಕೆ



ದಾವಣಗೆರೆ, ಏ. 14- ಮಾಯಕೊಂಡ ಕ್ಷೇತ್ರದಲ್ಲಿ ಬಿಜೆಪಿಯಿಂದ ಬಂಡಾಯ ಎದ್ದಿರುವ 11 ಜನ ಆಕಾಂಕ್ಷಿಗಳು ಒಟ್ಟಾಗಿ ಆರ್.ಎಲ್. ಶಿವಪ್ರಕಾಶ್ ಅವರನ್ನು ಕಣಕ್ಕಿಳಿಸುವುದಾಗಿ ಹೇಳಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬಂಡಾಯ ಅಭ್ಯರ್ಥಿಯೂ ಆಗಿರುವ ರಾಜ್ಯ ಬಿಜೆಪಿ ಮಾಜಿ ಕಾರ್ಯದರ್ಶಿ ಹೆಚ್.ಕೆ. ಬಸವರಾಜ್, ಹೊಸಬರಿಗೆ ಟಿಕೆಟ್ ನೀಡದ ಮುಖಂಡರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಆರಂಭದ ದಿನಗಳಿಂದಲೂ ನಾವು ಪ್ರಾಮಾಣಿಕವಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೆವು. ಹೊಸ ಮುಖಗಳಿಗೆ ಆದ್ಯತೆ ನೀಡುವುದಾಗಿ ಪಕ್ಷದ ವರಿಷ್ಠರು ಭರವಸೆ ನೀಡಿದ್ದರು. ಆದರೆ ಇದೀಗ ಮಾಜಿ ಶಾಸಕ ಬಸವರಾಜ ನಾಯ್ಕ ಅವರಿಗೆ ಟಿಕೆಟ್ ಘೋಷಣೆ ಮಾಡಿರುವುದು ನಮಗೆ ಅಸಮಾಧಾನ ತಂದಿದೆ.

ಈ ಹಿನ್ನೆಲೆಯಲ್ಲಿ ಮಾಯಕೊಂಡ ಕ್ಷೇತ್ರದ 11 ಜನ ಬಿಜೆಪಿ ಆಕಾಂಕ್ಷಿಗಳೆಲ್ಲರೂ ಒಟ್ಟಾಗಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರೂ, ಮಹಾನಗರ ಪಾಲಿಕೆ ಸದಸ್ಯರೂ ಆಗಿರುವ ಆರ್.ಎಲ್. ಶಿವಪ್ರಕಾಶ್ ಅವರನ್ನು ಕಣಕ್ಕಿಳಿಸಲಿದ್ದೇವೆ.

ಎಲ್ಲರೂ ಅವರ ಗೆಲುವಿಗೆ ಒಟ್ಟಾಗಿ ಶ್ರಮಿಸಿ, ಮತ್ತೆ ಬಿಜೆಪಿಗೇ ಕಳುಹಿಸಿಕೊಡುತ್ತೇವೆ ಎಂದು ಹೇಳಿದರು.

ಲಂಬಾಣಿ, ಮಾದಿಗ, ಚೆಲುವಾದಿ, ಭೋವಿ ಸೇರಿದಂತೆ ಈ ನಾಲ್ಕೂ ಜನಾಂಗಗಳಲ್ಲಿ ಯಾರೊಬ್ಬರಿಗಾದರೂ ಹೊಸಬರಿಗೆ ಟಿಕೆಟ್ ಸಿಗುವ ನಿರೀಕ್ಷೆ ಇತ್ತು.

ಆದರೆ ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದಂತೆ ವರಿಷ್ಠರು ಎಡವಿದ್ದಾರೆ. ನಾಯಕರೊಬ್ಬರ ಶಿಫಾರಸ್ಸಿನ ಮೇಲೆಯೇ ಅವರಿಗೆ ಟಿಕೆಟ್ ದೊರೆತಿದೆ ಎಂದರು.

ಜಿಲ್ಲಾ ಉಪಾಧ್ಯಕ್ಷ ಜಿ.ಮಂಜಾನಾಯ್ಕ ಮಾತನಾಡಿ, ಪಕ್ಷದ ವರಿಷ್ಠರು ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಟಿಕೆಟ್ ಘೋಷಣೆ ಮಾಡಿದ್ದಾರೆ ಎಂದು ಆರೋಪಿಸಿದರು.

ಈ ಹಿಂದೆ ಹೀನಾಯವಾಗಿ ಸೋತು, 2018ರಲ್ಲಿ ಟಿಕೆಟ್ ಕೊಡದ ಕಾರಣಕ್ಕಾಗಿ ವರಿಷ್ಠರನ್ನು ನಿಂದಿಸಿ, ಜೆಡಿಎಸ್ ಪಕ್ಷ ಸೇರಿ ಮತ್ತೆ ಬಿಜೆಪಿಗೆ ಬಂದು ಲಾಭಿ ಮಾಡಿದ ವ್ಯಕ್ತಿಗೆ ಟಿಕೆಟ್ ಘೋಷಣೆ ಮಾಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಆರ್.ಎಲ್. ಶಿವಪ್ರಕಾಶ್, ಎನ್. ಹನುಮಂತನಾಯ್ಕ, ಬಿ.ರಮೇಶ್ ನಾಯ್ಕ, ಮೋಹನ್ ಕುಮಾರ್, ಆಲೂರು ನಿಂಗರಾಜ್, ಗಂಗಾಧರ್, ಶಶಿ ಇತರರು ಉಪಸ್ಥಿತರಿದ್ದರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte